ಕರ್ನಾಟಕ ಸರ್ಕಾರ

# ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ

# ಮಾಹಿತಿ ಹಕ್ಕು ಅಧಿನಿಯಮ 2005

(01.01.2025 ರಂದು ಇರುವಂತೆ)

ನಿರ್ದೇಶಕರ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ,

ನಂ:16ಸಿ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ,

ವಸಂತನಗರ, ಬೆಂಗಳೂರು-560052

## ವೆಬ್ ಸೈಟ್ ವಿಳಾಸ:

**Web: www.dom.karnataka.gov.in**

**Email:directorgokdom@gmail.com**

**Phone No: 080 22535901/22535902**

## ಸಹಾಯವಾಣಿ ಸಂಖ್ಯೆ: 8277799990

## ಅಲ್ಪಸಂಖ್ಯಾತರ ನಿರ್ದೇಶನಾಲಯ

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

## ಅಲ್ಪಸಂಖ್ಯಾತರ ನಿರ್ದೇಶನಾಲಯ ಆಡಳಿತ ವ್ಯವಸ್ಥೆ

## (Organizational Chart)

ರಾಜ್ಯಮಟ್ಟದಲ್ಲಿ



## ಜಿಲ್ಲಾ ಕಛೇರಿ ಆಡಳಿತ ವ್ಯವಸ್ಥೆ
## (Organizational Chart)

ಜಿಲ್ಲಾ ಮಟ್ಟದಲ್ಲಿ



# ಮಾಹಿತಿ ಹಕ್ಕು ಅಧಿನಿಯಮ 2005ರ ಕಾಯ್ದೆ
# 4(1)ಬಿ ರನ್ವಯ ಮಾಹಿತಿ

## I) ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು:-

ಕರ್ನಾಟಕ ರಾಜ್ಯದಲ್ಲಿ ಮತೀಯ ಅಲ್ಪಸಂಖ್ಯಾತರ ಜನಸಂಖ್ಯೆಯು ರಾಜ್ಯದ ಒಟ್ಟು ಜನಸಂಖ್ಯೆಯ 96.01 ಲಕ್ಷವಾಗಿದ್ದು, ಶೇಕಡ 16.28 ರಷ್ಟು ಇರುತ್ತದೆ. ಅಲ್ಪಸಂಖ್ಯಾತರ ಸಮುದಾಯದವರ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಸಬಲೀಕರಣಗೊಳಿಸುವ ಸಲುವಾಗಿ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗವು 1994ರಲ್ಲಿ ಹಾಗೂ ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು 1986ರಿಂದಲೂ ಕಾರ್ಯನಿರ್ವಹಿಸುತ್ತಿದ್ದು, ಅಲ್ಪಸಂಖ್ಯಾತರ ಶೈಕ್ಷಣಿಕ ಹಾಗೂ ಸರ್ವತೋಮುಖ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯನ್ನು ಪ್ರತ್ಯೇಕವಾಗಿ ಅಸ್ತಿತ್ವಕ್ಕೆ ತಂದಿದ್ದು, 1999-2000ನೇ ಸಾಲಿನಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಬೇರ್ಪಟ್ಟು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿರುತ್ತದೆ. ಹಿಂದುಳಿದ ವರ್ಗಗಳ ಇಲಾಖೆಯಿಂದ ಅಲ್ಪಸಂಖ್ಯಾತರಿಗಾಗಿ ಜಾರಿಯಾಗುತ್ತಿದ್ದ ಕಲ್ಯಾಣ ಕಾರ್ಯಕ್ರಮಗಳನ್ನು ಈ ಇಲಾಖೆಗೆ ವರ್ಗಾಯಿಸಿದ್ದು, ಅಲ್ಪಸಂಖ್ಯಾತರ ವರ್ಗದ ಅಭಿವೃದ್ಧಿಗಾಗಿ ಸರ್ಕಾರವು ವಿಶೇಷ ಗಮನ ನೀಡುವುದಕ್ಕೆ ಸಾಕ್ಷಿಯಾಗಿದೆ.

ರಾಜ್ಯ ಮಟ್ಟದಲ್ಲಿ ನಿರ್ದೇಶನಾಲಯ, ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿ ಪ್ರತ್ಯೇಕ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳ ಕಛೇರಿಗಳನ್ನು ಸ್ಥಾಪಿಸುವುದರ ಮೂಲಕ ಅಲ್ಪಸಂಖ್ಯಾತರ ವರ್ಗಗಳಿಗೆ ಪ್ರತ್ಯೇಕವಾಗಿ ಭಾರತ ಸಂವಿಧಾನದ ಅನುಚ್ಛೇಧ 15(4) ರಡಿಯಲ್ಲಿ ಶೈಕ್ಷಣಿಕ ಹಾಗೂ 16(4) ರಡಿಯಲ್ಲಿ ಔದ್ಯೋಗಿಕ ಮೀಸಲಾತಿ ಸೌಲಭ್ಯ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸಿದೆ.

2024-25ನೇ ಸಾಲಿನಲ್ಲಿ ಸರ್ಕಾರವು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ರಾಜ್ಯ ವಲಯದಡಿ ರೂ.227457.80 ಲಕ್ಷ ಹಾಗೂ ಕೇಂದ್ರ ವಲಯ ಯೋಜನೆಯಡಿ ರೂ.28400.00 ಲಕ್ಷ ಮತ್ತು ಜಿಲ್ಲಾ ವಲಯ ರೂ.13534.33 ಲಕ್ಷ ಒಟ್ಟು ಆಯವ್ಯಯ ರೂ.269392.13 ಲಕ್ಷ ಆಯವ್ಯಯ ಒದಗಿಸಿದೆ.

ಅಲ್ಪಸಂಖ್ಯಾತರ ಇಲಾಖೆ ರೂಪಿಸಿರುವ ಕ್ರಿಯಾ ಯೋಜನೆಯಲ್ಲಿ ಈ ಇಲಾಖೆಯ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಸಂಬಂಧ ಅಗತ್ಯ ಮಾರ್ಗದರ್ಶನವನ್ನು ನೀಡಲಾಗಿದ್ದು. ಇದು ಇಲಾಖೆಯ ಕಾರ್ಯಕ್ರಮಗಳನ್ನು ಕ್ರಮಬದ್ಧವಾಗಿ ಜಾರಿಗೆ ತರಲು ಸಹಾಯವಾಗಲಿದೆ ಎಂದು ಅಭಿಪ್ರಾಯಪಡಲಾಗಿದೆ.

ಜಿಲ್ಲೆಯಲ್ಲಿರುವ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಜಿಲ್ಲಾ ಅಲ್ಪಸಂಖ್ಯಾತರ ಅಧಿಕಾರಿಗಳು ಈ ಇಲಾಖೆಯ ಕಾರ್ಯಕ್ರಮಗಳ ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿದ್ದಾರೆ.

ಅಲ್ಪಸಂಖ್ಯಾತರಿಗಾಗಿ ಕೇಂದ್ರ ವಲಯ, ರಾಜ್ಯ ವಲಯ ಮತ್ತು ಜಿಲ್ಲಾ ವಲಯವಾರು ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸುವುದಲ್ಲದೇ ಪ್ರತಿ ವರ್ಷ ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸಿ ಅವುಗಳ ಪರಿಣಾಮಕಾರಿ ಅನುಷ್ಟಾನಕ್ಕಾಗಿ ಅಗತ್ಯ ಕ್ರಮ ಕೈಗೊಳ್ಳುವುದು ನಿರ್ದೇಶನಾಲಯದ ಮುಖ್ಯ ಉದ್ದೇಶವಾಗಿರುತ್ತದೆ.

## (ii) ಅಧಿಕಾರಿಗಳ ಮತ್ತು ನೌಕರರ ಅಧಿಕಾರಗಳನ್ನು ಮತ್ತು ಕರ್ತವ್ಯಗಳ ವಿವರಣೆ

### ಅಲ್ಪಸಂಖ್ಯಾತರ ನಿರ್ದೇಶನಾಲಯ:-

**ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ (ಕೇಂದ್ರ ಕಛೇರಿ) ಹುದ್ದೆಗಳ ವಿವರ.**

| ಕ್ರ.ಸಂ | ಪದನಾಮ | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|---|
| 1 | ನಿರ್ದೇಶಕರು | 144700-197200 | 01 |
| 2 | ಜಂಟಿ ನಿರ್ದೇಶಕರು | 118700-175200 | 01 |
| 3 | ಉಪ ನಿರ್ದೇಶಕರು | 97100-163200 | 01 |
| 4 | ಸಹಾಯಕ ನಿರ್ದೇಶಕರು (ಗ್ರೇಡ್-1) | 83700-155200 | 04 |
| 5 | ಲೆಕ್ಕಾಧಿಕಾರಿ | 83700-155200 | 01 |
| 6 | ಸಹಾಯಕ ಕಾರ್ಯಪಾಲಕ ಅಭಿಯಂತರರು | 83700-155200 | 01 |
| 7 | ಸಹಾಯಕ ನಿರ್ದೇಶಕರು (ಗ್ರೇಡ್-2) | 69250-134200 | 07 |
| 8 | ಸೀನಿಯರ್ ಪ್ರೋಗ್ರಾಮರ್ | 83700-155200 | 01 |
| 9 | ಕಾನೂನು ಅಧಿಕಾರಿ | On-Contract | 01 |
| 10 | ಗ್ರಂಥಪಾಲಕರು | 69250-134200 | 01 |
| 11 | ಜೂನಿಯರ್ ಪ್ರೋಗ್ರಾಮರ್ | 69250-134200 | 01 |
| 12 | ಕಛೇರಿ ಅಧೀಕ್ಷಕರು | 65950-124900 | 03 |
| 13 | ಲೆಕ್ಕ ಅಧೀಕ್ಷಕರು | 65950-124900 | 01 |
| 14 | ಸಾಂಖ್ಯಿಕ ಅಧೀಕ್ಷಕರು | 65950-124900 | 01 |
| 15 | ಕಛೇರಿ ಅಧೀಕ್ಷಕರು | 54175-99400 | 08 |
| 16 | ಶೀಘ್ರಲಿಪಿಗಾರರು | 44425-83700 | 01 |
| 17 | ಪ್ರಥಮ ದರ್ಜೆ ಸಹಾಯಕರು | 44425-83700 | 04 |
| 18 | ಪ್ರಥಮ ದರ್ಜೆ ಸಹಾಯಕರು (ಗಣಕಯಂತ್ರ ಜ್ಞಾನವುಳ್ಳ) | 44425-83700 | 03 |
| 19 | ದ್ವಿತೀಯ ದರ್ಜೆ ಸಹಾಯಕರು | 34100-67600 | 04 |
| 20 | ಬೆರಳಚ್ಚುಗಾರರು/ಡಾಟಾ ಎಂಟ್ರಿ ಆಪರೇಟರ್ | 34100-67600 | 04 |
| 21 | ವಾಹನ ಚಾಲಕರು | 34100-67600 | 08 |
| 22 | ಡಿ ಗ್ರೂಪ್ | 27000-46675 | 08 |
| | ಒಟ್ಟು | | 65 |

| ನೋಡೆಲ್ ಮಾಹಿತಿ ಕೇಂದ್ರ (ತಾತ್ಕಾಲಿಕ ಹುದ್ದೆ) | | | |
|---|---|---|---|
| 1 | ಮಾಹಿತಿ ಸಮನ್ವಯಾಧಿಕಾರಿ | 25000 | 01 |
| 2 | ಜೂನಿಯರ್ ಪ್ರೋಗ್ರಾಮರ್ | 20000 | 01 |
| 3 | ಡಾಟಾ ಎಂಟ್ರಿ ಆಪರೇಟರ್ | 15000 | 01 |
| 4 | ಡಿ ಗ್ರೂಪ್ | 10000 | 01 |

**ಜಿಲ್ಲಾ ಮಟ್ಟದಲ್ಲಿ:-**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಬೇರ್ಪಡಿಸಿ ಸೃಜಿಸಲಾಗಿದ್ದು, ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಿಲ್ಲಾಮಟ್ಟದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯಕ್ಕೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಈಗಾಗಲೇ ರಚಿಸಿದ್ದು, ಸರ್ಕಾರಿ ಅಧಿಸೂಚನೆ ಸಂಖ್ಯೆ: ಎಂಡಬ್ಲ್ಯೂಡಿ 154 ಡಬ್ಲ್ಯೂಇಎಸ್ 2011, ದಿನಾಂಕ: 15.03.2011 ರಲ್ಲಿ 1716 ವಿವಿಧ ಹುದ್ದೆಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿ ಅಂತಿಮ ಸ್ವರೂಪವನ್ನು ಪಡೆದು ಮಂಜೂರಾತಿ ಪಡೆದಿದೆ. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 216 ಎಂಡಿಎಸ್ 2010, ದಿನಾಂಕ:28.08.2009, ಎಂಡಬ್ಲ್ಯೂಡಿ 216 ಎಂಡಿಎಸ್ 2010,ದಿನಾಂಕ:25/08/2010, ಅಸಂಕಇ 04 ಅಸಂಯೋ 2012 ದಿನಾಂಕ:26.09.2012 ಮತ್ತು ಎಂಡಬ್ಲ್ಯೂಡಿ 203 ಎಂಡಿಎಸ್ 2014 ದಿನಾಂಕ:09.02.2015ರಲ್ಲಿ ಒಟ್ಟು 31 ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತರ ಜಿಲ್ಲಾ ಕಛೇರಿಯನ್ನು [ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಮಂಡ್ಯ, ರಾಮನಗರ, ತುಮಕೂರು, ಚಾಮರಾಜನಗರ, ಹಾಸನ, ಬೆಳಗಾಂ, ಬೀದರ್, ಬಿಜಾಪುರ, ಬಳ್ಳಾರಿ, ಬಾಗಲಕೋಟೆ, ಚಿಕ್ಕಮಗಳೂರು, ದಾವಣಗೆರೆ, ಗುಲ್ಬರ್ಗಾ, ಗದಗ, ಕೋಲಾರ, ಮೈಸೂರು, ಶಿವಮೊಗ್ಗ, ಹಾವೇರಿ, ಕೊಡಗು, ಕೊಪ್ಪಳ, ಉಡುಪಿ, ಉತ್ತರ ಕನ್ನಡ, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ಧಾರವಾಡ, ಉಡುಪಿ, ಯಾದಗಿರಿ ಮತ್ತು ವಿಜಯನಗರ ಜಿಲ್ಲೆ ಪ್ರಾರಂಭಿಸಲಾಗಿದ್ದು, ಪ್ರಸ್ತುತ ಕಾರ್ಯನಿರ್ವಹಿಸುತ್ತಿವೆ.

ಅಲ್ಪಸಂಖ್ಯಾತರ ನಿರ್ದೇಶನಾಲಯದ ಕಾರ್ಯಕ್ರಮಗಳನ್ನು ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿಗಳು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುತ್ತಿದ್ದು, ಅಭಿವೃದ್ಧಿ ಕಾರ್ಯಕ್ರಮಗಳ ವಿಷಯ ನಿರ್ವಹಣೆಗಾಗಿ ಪ್ರತಿ ಜಿಲ್ಲೆಗಳಲ್ಲಿ ಕಛೇರಿ ಅಧೀಕ್ಷಕರು/ಲೆಕ್ಕ ಅಧೀಕ್ಷಕರು, ಪ್ರ.ದ.ಸ, ದ್ವಿ.ದ.ಸ, ವಾಹನ ಚಾಲಕರು, ಮತ್ತು ಗ್ರೂಪ್ 'ಡಿ' ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.

**(iii) ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳು**

ಸರ್ಕಾರಿ ಆದೇಶದಂತೆ ತೀರ್ಮಾನ ತೆಗೆದುಕೊಳ್ಳಲಾಗುವುದು.

**(iv) ಅದರ ಕಾರ್ಯಗಳ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು:**

## ಕಾರ್ಯಕ್ರಮಗಳ ವಿವರ ಮತ್ತು ಮಾರ್ಗಸೂಚಿಗಳು

## I. ವಿದ್ಯಾರ್ಥಿ ವೇತನ ಕಾರ್ಯಕ್ರಮ

ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಕರ್ನಾಟಕ ಸರ್ಕಾರದಿಂದ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ, ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಮೆರಿಟ್-ಕಮ್-ಮೀನ್ಸ್ ವಿದ್ಯಾರ್ಥಿ ವೇತನ, ಶುಲ್ಕ ಮರು ಪಾವತಿ ಯೋಜನೆ, ಎಂ.ಫಿ.ಎಲ್. ಮತ್ತು ಪಿ.ಹೆಚ್.ಡಿ ಫೆಲೋಶಿಫ್ ಯೋಜನೆ, ಬಿ.ಎಸ್ಸಿ ನರ್ಸಿಂಗ್ ಮತ್ತು ಜಿಎನ್‌ಎಂ ನರ್ಸಿಂಗ್ ಉತ್ತೇಜನ ಯೋಜನೆ ಹಾಗೂ ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

## ಎ) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ:-

1ನೇ ತರಗತಿಯಿಂದ 8ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುವುದು. ಅರ್ಜಿ ಸಲ್ಲಿಸುವ ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯ ಮಿತಿ ರೂ.1.00 ಲಕ್ಷಕ್ಕೆ ಮೀರಿರಬಾರದು, ವಿದ್ಯಾರ್ಥಿಯು ಹಿಂದಿನ ತರಗತಿಯಲ್ಲಿ ಶೇ.50 ರಷ್ಟು ಅಂಕ ಗಳಿಸಿರಬೇಕು (1ನೇ ತರಗತಿ ಹೊರತುಪಡಿಸಿ) ಶೇ30ರಷ್ಟು ವಿದ್ಯಾರ್ಥಿ ವೇತನವನ್ನು ಬಾಲಕಿಯರಿಗಾಗಿ ನೀಡಲಾಗುತ್ತಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರಾಜ್ಯದ ಸರ್ಕಾರಿ/ಅನುದಾನಿತ/ಅನುದಾನ/ರಹಿತ ಹಾಗೂ ಖಾಸಗಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ವಿದ್ಯಾರ್ಥಿ ವೇತನ ನೀಡಲಾಗುವುದು.

| Class /Course | ಕರ್ನಾಟಕ ಸರ್ಕಾರ |
|---|---|
| Govt Schools I to VIII | Rs. 1,000/-p.a |
| Pvt School I to V | Rs. 1,000/-p.a |
| Pvt Schools VI | Rs.2,500/-p.a |
| Pvt Schools VII | Rs. 3,000/-p.a |
| Pvt Schools VIII | Rs. 3,500/-p.a |

## ಬಿ) ಮೆಟ್ರಿಕ್ ನಂತರ ವಿದ್ಯಾರ್ಥಿ ವೇತನ:-

ಪದವಿ ಪೂರ್ವ (ತತ್ಸಮಾನ). ಪದವಿ, ಸ್ನಾತಕೋತ್ತರ ಹಾಗೂ ಎಂ.ಫಿಲ್, ಪಿ.ಹೆಚ್.ಡಿ.ಯವರಿಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುತ್ತದೆ. ಹಿಂದಿನ ವರ್ಷದ ಪರೀಕ್ಷೆ/ಸೆಮಿಸ್ಟರ್‌ನಲ್ಲಿಶೇ.50 ರಷ್ಟು ಅಂಕ ಗಳಿಸಿರಬೇಕು. ಕುಟುಂಬದ ವಾರ್ಷಿಕ ವರಮಾನ ರೂ.2.00 ಲಕ್ಷಕ್ಕೆ ಮೀರಿರಬಾರದು. ಶೇ.30ರಷ್ಟು ವಿದ್ಯಾರ್ಥಿ ವೇತನವನ್ನು ಬಾಲಕಿಯರಿಗಾಗಿ ಮೀಸಲಿರಿಸಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರಾಜ್ಯದ ಸರ್ಕಾರಿ/ ಅನುದಾನಿತ/ ಅನುದಾನ ರಹಿತ ಹಾಗೂ ಖಾಸಗಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.

| Class/ Course | ಕರ್ನಾಟಕ ಸರ್ಕಾರ |
|---|---|
| PUC | Rs. 9,000/- p.a |
| Technical & Vocational PUC level | |
| UG & PG | Rs.3,000/- p.a |
| Mphil & Ph.D | Rs.3,000/- p.a |

## ಸಿ) ಮೆರಿಟ್-ಕಮ್-ಮೀನ್ಸ್ ಆಧಾರಿತ ವಿದ್ಯಾರ್ಥಿ ವೇತನ:-

ತಾಂತ್ರಿಕ ಹಾಗೂ ವೃತ್ತಿಪರ ವಿವಿಧ ಕೋರ್ಸ್‌ಗಳಲ್ಲಿ (ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುವುದು. ವಿದ್ಯಾರ್ಥಿಯು ಹಿಂದಿನ ವರ್ಷದ ಪರೀಕ್ಷೆ/ಸೆಮಿಸ್ಟರ್‌ನಲ್ಲಿ ಶೇ.50 ರಷ್ಟು ಅಂಕಗಳಿಸಿರಬೇಕು. ಕುಟುಂಬದ ವಾರ್ಷಿಕ ವರಮಾನ ರೂ.2.50 ಲಕ್ಷಗಳು ಮೀರಿರಬಾರದು. ಶೇ.30 ರಷ್ಟು ವಿದ್ಯಾರ್ಥಿ ವೇತನವನ್ನು ಬಾಲಕಿಯರಿಗಾಗಿ ಮೀಸಲಿರಿಸಿದೆ. ಗರಿಷ್ಠ ರೂ.25,000/- ವಿದಾರ್ಥಿ ವೇತನವನ್ನು ನೀಡಲಾಗುವುದು.

| Class /Course | ಕರ್ನಾಟಕ ಸರ್ಕಾರ |
|---|---|
| B.E & Equivalent<br>MBBS & Equivalent<br>MBA/M.Tech and Equivalent<br>M.D & Equivalent | Rs. 25,000/-p.a |
| | |

## (ಡಿ) ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ:-

ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳು ಹೊರದೇಶದ QS World Top Universities 500 ಪಟ್ಟಿಯಲ್ಲಿನ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡಲು ವಿದ್ಯಾರ್ಥಿವೇತನ ನೀಡುವ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರದಿಂದ ಕೆಳಕಂಡ ಷರತ್ತುಗಳೊಂದಿಗೆ ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ 6 ಲಕ್ಷಕ್ಕಿಂತ ಕಡಿಮೆ ಇರುವಂತಹ ವಿದ್ಯಾರ್ಥಿಗಳಿಗೆ 2 ವರ್ಷಕ್ಕೆ ಗರಿಷ್ಠ 20 ಲಕ್ಷ ಮತ್ತು 6 ಲಕ್ಷದಿಂದ 15 ಲಕ್ಷ ಇರುವ ವಾರ್ಷಿಕ ವರಮಾನದ ವಿದ್ಯಾರ್ಥಿಗಳಿಗೆ 2 ವರ್ಷಕ್ಕೆ ಗರಿಷ್ಠ 10 ಲಕ್ಷ ವಿದ್ಯಾರ್ಥಿವೇತನವನ್ನು (ವಿದ್ಯಾರ್ಥಿಗಳು ಸಲ್ಲಿಸುವ ದಾಖಲೆಗಳ ಆಧಾರದ ಮೇರೆಗೆ) ನೀಡಲಾಗುವುದು. ಈ ವಿದ್ಯಾರ್ಥಿ ವೇತನವನ್ನು ಕೋರ್ಸ್‌ಗಳ ಅವಧಿಯ ಆಧಾರದ ಮೇರೆಗೆ ವಿದ್ಯಾರ್ಥಿಯ 1 ಅಥವಾ 2 ವರ್ಷಗಳ ಗರಿಷ್ಠ ಅವಧಿಗೆ ಮಾತ್ರ ನೀಡಲಾಗುವುದು.

### ಅರ್ಹತೆಗಳು:

1. ಈ ವಿದ್ಯಾರ್ಥಿವೇತನ ಪಡೆಯಲು ವಿದ್ಯಾರ್ಥಿಗಳು ಅವರ ಹಿಂದಿನ ವರ್ಷದ ಅಂತಿಮ ಪರೀಕ್ಷೆಯಲ್ಲಿ/ಸೆಮಿಸ್ಟರ್‌ನಲ್ಲಿ ಶೇ.60% ಅಥವಾ ಅದಕ್ಕಿಂತ ಹೆಚ್ಚಿನ ಅಂಕ ಗಳಿಸಿರಬೇಕು.
2. ಈ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
3. ಈ ವಿದ್ಯಾರ್ಥಿವೇತನ ಪಡೆಯಲು ಗರಿಷ್ಠ 38 ವಯಸ್ಸು ಮೀರಿರಬಾರದು.
4. ವಿದ್ಯಾರ್ಥಿವೇತನ ಮಂಜೂರಾದ ವಿದ್ಯಾರ್ಥಿಗಳಿಗೆ ಅವರ ವಿದ್ಯಾರ್ಥಿವೇತನವನ್ನು ನೇರವಾಗಿ ಅವರ ಬ್ಯಾಂಕಿನ ಖಾತೆಗೆ DBT ಮೂಲಕ ಜಮಾ ಮಾಡಲಾಗುವುದು.

## (ಇ) ಪಿ. ಹೆಚ್‌ಡಿ ಮತ್ತು ಎಂಪಿಲ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಫೆಲೋಶಿಫ್:-

ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯಗಳಲ್ಲಿ ಪಿ.ಹೆಚ್.ಡಿ ವ್ಯಾಸಂಗ ಮಾಡುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ 3 ವರ್ಷ ಮತ್ತು ಎಂ.ಫಿಲ್ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಜೆ.ಆರ್.ಎಫ್ ಮಾದರಿಯಲ್ಲಿ 2 ವರ್ಷ ಅವಧಿಗೆ ಮಾತ್ರ ಪ್ರತಿ ಮಾಹೆಯಾನ ರೂ. ರೂ. 10,000/-ಗಳ ಫೆಲೋಶಿಫ್ ನೀಡಲಾಗುವುದು.

**ಷರತ್ತುಗಳು:-**

1) ಪಿಹೆಚ್‌ಡಿ/ಎಂಪಿಲ್ ವ್ಯಾಸಂಗವನ್ನು ಭಾರತ/ಕರ್ನಾಟಕ ರಾಜ್ಯದ ಶಾಸನಬದ್ಧ ಅಂಗೀಕೃತವಾದ ವಿಶ್ವವಿದ್ಯಾನಿಯಗಳಲ್ಲಿ ಮಾಡತಕ್ಕದ್ದು.
2) ವಿದ್ಯಾರ್ಥಿಯ ವಯಸ್ಸು 35 ವರ್ಷಕ್ಕಿಂತ ಕಡಿಮೆ ಇರಬೇಕು.
3) ವಿದ್ಯಾರ್ಥಿಯ ಹಾಗೂ ಕುಟುಂಬದ ವಾರ್ಷಿಕ ಆದಾಯ ಮಿತಿ ಎಲ್ಲಾ ಮೂಲಗಳಿಂದ ವರ್ಷಕ್ಕೆ ರೂ. ೮.೦೦ ಲಕ್ಷ ಮೀರಿರಬಾರದು.
4) ವಿದ್ಯಾರ್ಥಿಯು ಯಾವುದೇ ಸರ್ಕಾರಿ ಉದ್ಯೋಗದಲ್ಲಿರಬಾರದು.

## (ಈ) ಮೆಟ್ರಿಕ್ ನಂತರದ ಶುಲ್ಕ ಮರುಪಾವತಿ ಯೋಜನೆ:-

ಮೆಟ್ರಿಕ್ ನಂತರದ ಪದವಿ ಪೂರ್ವ ಕೋರ್ಸುಗಳು, ಪದವಿ ಪೂರ್ವ ಹಂತದ ವೃತ್ತಿಪರ ಹಾಗೂ ತಾಂತ್ರಿಕ ಕೋರ್ಸುಗಳು, ಪದವಿ ಕೋರ್ಸುಗಳು, ಪದವಿ ಹಂತದ ವೈದ್ಯಕೀಯ, ಪದವಿ ಹಂತದ ವೃತ್ತಿಪರ ಹಾಗೂ ತಾಂತ್ರಿಕ ಕೋರ್ಸುಗಳು/ಕೃಷಿ ಸಂಬಂಧಿತ ಕೋರ್ಸುಗಳು, ಸ್ನಾತಕೋತ್ತರ ಕೋರ್ಸುಗಳು, ಎಂಫಿಲ್ - ಪಿಹೆಚ್.ಡಿ ಕೋರ್ಸುಗಳು, ಸ್ನಾತಕೋತ್ತರ ಹಂತದ ವೈದ್ಯಕೀಯ ಮತ್ತು ಸ್ನಾತಕೋತ್ತರ ವೃತ್ತಿಪರ ಹಾಗೂ ತಾಂತ್ರಿಕ/ಕೃಷಿ ಹಾಗೂ ಇತರೆ ಸಂಬಂಧಿತ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಡಿ.ಬಿ.ಟಿ ಮೂಲಕ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಶುಲ್ಕ ಮರುಪಾವತಿ ಮಾಡಲಾಗುತ್ತದೆ.

| ಕ್ರ.ಸಂ. | ಯೋಜನೆಯಡಿ ಬರುವ ಕೋರ್ಸುಗಳ ವಿವರ | ಕೋರ್ಸ್ ವಿವರ | ಶುಲ್ಕ ಮರುಪಾವತಿ |
|---|---|---|---|
| 01 | ಪದವಿ ಪೂರ್ವ ಕೋರ್ಸುಗಳು | ಪಿ.ಯು.ಸಿ (ಕಲಾ, ವಾಣಿಜ್ಯ, ವಿಜ್ಞಾನ) ಕೋರ್ಸುಗಳು | ರೂ. 3000 ರವರೆಗೆ |
| 02 | ಪದವಿ ಪೂರ್ವ ಹಂತದ ವೃತ್ತಿಪರ ಹಾಗೂ ತಾಂತ್ರಿಕ ಕೋರ್ಸುಗಳು | ಡಿಪ್ಲೋಮ, ಐ.ಟಿ.ಐ ಮತ್ತು ಸಂಬಂಧಿತ ಕೋರ್ಸುಗಳು | ರೂ. 3000 ರವರೆಗೆ |
| 03 | ಪದವಿ ಕೋರ್ಸುಗಳು | ಸಾಮಾನ್ಯ ಪದವಿ ಕೋರ್ಸು | ರೂ. 4000 ರವರೆಗೆ |
| 04 | ಪದವಿ ಹಂತದ ವೃತ್ತಿಪರ ಹಾಗೂ ತಾಂತ್ರಿಕ ಕೋರ್ಸುಗಳು | ಇಂಜಿನಿಯರಿಂಗ್ ಕೋರ್ಸು | ರೂ. 25,000 ರವರೆಗೆ |
| | | ವೈದ್ಯಕೀಯ ಕೋರ್ಸು | ರೂ. 1,00,000 ರವರೆಗೆ |
| | | ಇತರೆ ಸಂಬಂಧಿತ ವೃತ್ತಿಪರ ಹಾಗೂ ತಾಂತ್ರಿಕ ಕೋರ್ಸು | ರೂ. 10,000 ರವರೆಗೆ |
| 05 | ಸ್ನಾತಕೋತ್ತರ ಕೋರ್ಸುಗಳು | ಎಲ್ಲಾ ಸ್ನಾತಕೋತ್ತರ (ಕಲಾ, ವಾಣಿಜ್ಯ, ವಿಜ್ಞಾನ) ಕೋರ್ಸುಗಳು | ರೂ. 10,000 ರವರೆಗೆ |
| 06 | ಸ್ನಾತಕೋತ್ತರ ಹಂತದ ಇತರೆ ವೃತ್ತಿಪರ ಹಾಗೂ ತಾಂತ್ರಿಕ ಕೋರ್ಸುಗಳು | ಇಂಜಿನಿಯರಿಂಗ್ ಕೋರ್ಸುಗಳು | ರೂ. 1,00,000 ರವರೆಗೆ |
| | | ವೈದ್ಯಕೀಯ ಕೋರ್ಸುಗಳು | ರೂ. 3,00,000 ರವರೆಗೆ |
| | | ಇತರೆ ವೃತ್ತಿಪರ ಹಾಗೂ ತಾಂತ್ರಿಕ ಕೋರ್ಸುಗಳು | ರೂ. 1,00,000 ರವರೆಗೆ |
| 07 | ಎಂಫಿಲ್ & ಪಿಹೆಚ್ .ಡಿ | - | ರೂ. 25,000 ರವರೆಗೆ |

## (ಉ) ಬಿ.ಎಸ್.ಸಿ ನರ್ಸಿಂಗ್ ಮತ್ತು ಜಿ.ಎನ್.ಎಂ. ನರ್ಸಿಂಗ್ ಉತ್ತೇಜನ:-

ಸರ್ಕಾರಿ/ಖಾಸಗಿ ಕಾಲೇಜುಗಳಲ್ಲಿ ಬಿ.ಎಸ್.ಸಿ ನರ್ಸಿಂಗ್ ಮತ್ತು ಜಿ.ಎನ್.ಎಂ ನರ್ಸಿಂಗ್ ಕೋರ್ಸ್ ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ಮುಸ್ಲಿಂ ,ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ ವಿದ್ಯಾರ್ಥಿಗಳಿಗೆ ಗರಿಷ್ಠ ರೂ.೨೫,೦೦೦/-ಗಳ ಉತ್ತೇಜನ ಮೊತ್ತವನ್ನು ಪ್ರತಿ ವರ್ಷ ನೀಡಲಾಗುವುದು.

1) ಅಭ್ಯರ್ಥಿಗಳು ಕರ್ನಾಟಕ ರಾಜ್ಯಕ್ಕೆ ಸೇರಿದವರಾಗಿರಬೇಕು.
2) ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.
3) ಸದರಿ ಉತ್ತೇಜನ ಮೊತ್ತವನ್ನು ಪಡೆಯಲು ಹಿಂದಿನ ವರ್ಷದ ಪರೀಕ್ಷೆಯಲ್ಲಿ ಕನಿಷ್ಠ 50% ಅಂಕಗಳು ಪಡೆದಿರಬೇಕು. ಒಂದು ವೇಳೆ ಅನುದಾನದ ಲಭ್ಯತೆ ಇದ್ದಲ್ಲಿ 50% ಕಿಂತ ಕಡಿಮೆ ಅಂಕ ಗಳಿಸಿರುವ ವಿದ್ಯಾರ್ಥಿಗಳ ಅರ್ಜಿಗಳನ್ನು ಸಹ ಮೆರಿಟ್ ಆಧಾರದ ಮೇಲೆ ಸದರಿ ಯೋಜನೆಯಡಿ ಪರಿಗಣಿಸಬಹುದು.
4) ಇಂಡಿಯನ್ ನರ್ಸಿಂಗ್ ಕೌನ್ಸಿಲ್ (ಐ.ಎನ್.ಸಿ) ನಿಂದ ಮಾನ್ಯತೆ ಪಡೆದ ಸಂಸ್ಥೆ/ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಹರಿರುತ್ತಾರೆ.

## 2. ಅಲ್ಪಸಂಖ್ಯಾತರ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆ:

ಲೆಕ್ಕಶೀರ್ಷಿಕೆ 2225-04-277-0-10 ರಾಜ್ಯವಲಯ

2024-25ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯ ರೂ.**39017.32** ಲಕ್ಷಗಳು.

### (2.1) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು:-

ರಾಜ್ಯದಲ್ಲಿ ಮತೀಯ ಅಲ್ಪಸಂಖ್ಯಾತರ ಜನಾಂಗದವರಿಗೆ 6 ರಿಂದ 12ನೇ ತರಗತಿಯವರೆಗೆ ಉತ್ತಮ ಶಿಕ್ಷಣ ನೀಡುವ ದೃಷ್ಟಿಯಿಂದ ವಿವಿಧ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ **115** ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, **13** ಪದವಿ ಪೂರ್ವ ವಸತಿ ಕಾಲೇಜುಗಳು ಮತ್ತು **04** ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು ಹಾಗೂ **29** ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.

### ಅ) ಅಲ್ಪಸಂಖ್ಯಾತರ ವಸತಿ ಶಾಲೆ/ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

(1) ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ ರೂ. 1,850/- ರ ವೆಚ್ಚದಲ್ಲಿ ಆಹಾರ ನೀಡಿಕೆ.
(2) ಉಚಿತ ವಸತಿ ಸೌಲಭ್ಯ.
(3) ಪ್ರತಿ ವಿದ್ಯಾರ್ಥಿಗೆ ವಾರ್ಷಿಕ ಎರಡು ಜೊತೆ ಸಮವಸ್ತ್ರ, ಬೂಟು, ಕಾಲುಚೀಲ ಪೂರೈಕೆ.
(4) ಪ್ರತಿ ಬಾಲಕ ವಿದ್ಯಾರ್ಥಿಗೆ ಎರಡು ತಿಂಗಳಿಗೊಮ್ಮೆ ರೂ 60/- ರಂತೆ ಕ್ಷೌರದ ವೆಚ್ಚ ನೀಡಿಕೆ (5 ಬಾರಿ ಮಾತ್ರ)
(5) ಪ್ರತಿ ವಿದ್ಯಾರ್ಥಿಗೆ ಶೈಕ್ಷಣಿಕ ಅಗತ್ಯಕ್ಕೆ ಅನುಗುಣವಾಗಿ ಪಠ್ಯ ಪುಸ್ತಕ ಮತ್ತು ಲೇಖನ ಸಾಮಾಗ್ರಿ ನೀಡಿಕೆ.
(6) ಪ್ರತಿ ವಿದ್ಯಾರ್ಥಿಗೆ ಉಚಿತ ಶುಚಿ ಕಿಟ್ (ಟೂಥ್‌ಪೇಸ್ಟ್, ಸೋಪ್, ಬ್ರಷ್, ಎಣ್ಣೆ ಹಾಗೂ ಇತರೆ)
(7) ಪ್ರತಿ ವಿದ್ಯಾರ್ಥಿಗೆ ಉಚಿತವಾಗಿ ವೈದ್ಯಕೀಯ ಸೌಲಭ್ಯ ಹಾಸಿಗೆ ಹೊದಿಕೆ, ಟ್ರಂಕ್, ಕಾಟ್, ಪ್ರಯೋಗ ಶಾಲೆ ಉಪಕರಣ, ಬೋಧನಾ ಸಲಕರಣೆ, ಕ್ರೀಡಾ ಸಾಮಗ್ರಿ, ಗ್ರಂಥಾಲಯಗಳ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.
(8) ಶೌಚಾಲಯಗಳ ಸ್ವಚ್ಛತೆಗಾಗಿ ಪ್ರತಿ ಶಾಲೆಗೆ ಮಾಹೆಯಾನ ರೂ.1,600/- ರಂತೆ 10 ತಿಂಗಳಿಗೆ.
(9) ಪ್ರತಿ ನಿಲಯಕ್ಕೆ 2 ದಿನಪತ್ರಿಕೆಗಳ ಪೂರೈಕೆ.
(10) ಕಟ್ಟಡಗಳ ಬಾಡಿಗೆ ಲೋಕೋಪಯೋಗಿ ಇಲಾಖೆ ನಿಗದಿಪಡಿಸಿದ ನಂತರ ಆಡಳಿತಾತ್ಮಕ ಅನುಮೋದನೆ ನೀಡಿದ ದರದಲ್ಲಿ ಪಾವತಿಸುವುದು.

(11) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಸ್ಥಳೀಯ ಶಾಸಕರು, ಶಿಫಾರಸ್ಸು ಮಾಡುವ ಇಬ್ಬರು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಅವಕಾಶ ಕಲ್ಪಿಸುವಂತೆ ಹಾಗೂ ವಸತಿ ಶಾಲೆಗಳಿಗೆ ಸಾಧ್ಯವಾದಷ್ಟು ಅದೇ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದು.

## **ಆ) ವಸತಿ ಶಾಲೆಗಳಿಗೆ ಪ್ರವೇಶಕ್ಕಾಗಿ ಅನುಸರಿಸುವ ಮಾನ ದಂಡಗಳು:-**

(1) ಈ ವಸತಿ ಶಾಲೆಗಳಲ್ಲಿ ಪ್ರವೇಶ ಪಡೆಯುವ ಅಭ್ಯರ್ಥಿಗಳು ರಾಜ್ಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ ಹಾಗೂ ಇತರೆ ಹಿಂದುಳಿದ ವರ್ಗಗಳ/SC/ST ಸಮುದಾಯಕ್ಕೆ ಸೇರಿರಬೇಕು.

(2) ಈ ಶಾಲೆಯನ್ನು 6 ರಿಂದ 10 ನೇ ತರಗತಿಯವರೆಗೆ ನಡೆಸಲಾಗುವುದು. ಪ್ರತಿ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ 50/60/80 ಆಗಿರುತ್ತದೆ. 6 ನೇ ತರಗತಿಗೆ ಸೇರ ಬಯಸುವ ಅಭ್ಯರ್ಥಿಗಳು ಸರ್ಕಾರದ ಅಥವಾ ಅಂಗೀಕೃತ ಶಾಲೆಗಳಲ್ಲಿ 5ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.

(3) ವಸತಿ ಶಾಲೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಸಂಬಂಧಿಸಿದ ಶಾಲೆಯ ಪ್ರಾಂಶುಪಾಲರು ಅಥವಾ ಅಲ್ಪಸಂಖ್ಯಾತರ ಜಿಲ್ಲಾ ಅಧಿಕಾರಿಗಳನ್ನು ಸಂಪರ್ಕಿಸಬೇಕು.

(4) ಪ್ರವೇಶ ಪರೀಕ್ಷೆಯನ್ನು ಕನ್ನಡ ಭಾಷೆ, ಗಣಿತ, ವಿಜ್ಞಾನ, ಸಾಮಾನ್ಯ ಜ್ಞಾನಗಳ ಮತ್ತು ಮತ್ತು ಇತರೆ ವಿಷಯಗಳ ಮೇಲೆ ನಡೆಸಿ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ಕೊಡಬೇಕು.

(5) ಈ ಶಾಲೆಗಳು ಸರ್ಕಾರಿ ಶಾಲೆಗಳಾಗಿದ್ದು, ಈ ಶಾಲೆಗಳಲ್ಲಿ ಭೋದಿಸುವ ಮಾಧ್ಯಮವು ಆಂಗ್ಲ ಆಗಿರುತ್ತದೆ. ಶಿಕ್ಷಣ ಇಲಾಖೆಯು ಕಾಲಕಾಲಕ್ಕೆ ನಮೂದಿಸಿರುವ ಪಠ್ಯ ಕ್ರಮದಂತೆಯೇ ಈ ವಸತಿ ಶಾಲೆಗಳಲ್ಲಿಯೂ ಪಠ್ಯಕ್ರಮ ಇರುತ್ತದೆ.

(6) ಈ ವಸತಿ ಶಾಲೆಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ರೂ. 2.50 ಲಕ್ಷ ಮೀರಿರಬಾರದು. ಶೇ.75 ರಷ್ಟು ಸ್ಥಾನಗಳನ್ನು (ಮುಸ್ಲಿಂ-77%, ಕ್ರಿಶ್ಚಿಯನ್-14%, ಜೈನ್-6% ಸಿಖ್-1%, ಬೌದ್ಧ-2%) ಅಲ್ಪಸಂಖ್ಯಾತರಿಗೆ ನೀಡಬೇಕು. ಅಲ್ಪಸಂಖ್ಯಾತರ ಸಮುದಾಯ ನಿರ್ದಿಷ್ಟ ಸಮುದಾಯದ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಲಭ್ಯವಿರುವ ಇತರೆ ಅಲ್ಪಸಂಖ್ಯಾತರ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ನೀಡಬಹುದು. ಶೇ.25 ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನೀಡತಕ್ಕದ್ದು.

(7) ಈ ವಸತಿ ಶಾಲೆಗಳಲ್ಲಿ ಅಭ್ಯರ್ಥಿಗಳು ಅನುತ್ತೀರ್ಣರಾದಲ್ಲಿ ಒಂದು ಶೈಕ್ಷಣಿಕ ಅವಧಿಗೆ ಮಾತ್ರ ಮುಂದುವರೆಸಬಹುದು.

(8) ಈ ವಸತಿ ಶಾಲೆಗಳಲ್ಲಿ ಪ್ರವೇಶ ಪಡೆಯುವ ಅಭ್ಯರ್ಥಿಯು ಮೆರಿಟ್ ವಿದ್ಯಾರ್ಥಿವೇತನ ಹೊರತುಪಡಿಸಿ ಬೇರೆ ಯಾವುದೇ ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹವಿರುವುದಿಲ್ಲ.

(9) ಶೇ. 60% ರಷ್ಟು ಸ್ಥಾನಗಳನ್ನು ಅದೇ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ನೀಡಬೇಕು.

(10) ಈ ವಸತಿ ಶಾಲೆಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಇಲಾಖೆಯ ಅಧಿಸೂಚನೆಯಂತೆ ಸೇವಾ ಸಿಂಧು ಪೋರ್ಟಲ್ ಮುಖಾಂತರ ಜಿಲ್ಲಾ ಅಲ್ಪಸಂಖ್ಯಾತರ ಅಧಿಕಾರಿಗಳಿಗೆ ನಿಗದಿತ ಅರ್ಜಿಯನ್ನು 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಶಾಲೆಯ ಮುಖ್ಯೋಪಾಧ್ಯಾಯರಿಂದ ಸರ್ಕಾರಿ/ಅಂಗೀಕೃತ ಶಾಲೆಗೆ ಸೇರಿದ ವಿದ್ಯಾರ್ಥಿಗಳೆಂದು ದೃಢೀಕರಣ ಪತ್ರ, ವಯಸ್ಸಿನ ಪ್ರಮಾಣ ಪತ್ರ ಹಾಗೂ ತಹಶೀಲ್ದಾರ್‌ರವರಿಂದ ಪಡೆದ ಜಾತಿ/ಆದಾಯ ಪ್ರಮಾಣ ಪತ್ರಗಳೊಂದಿಗೆ ಸಲ್ಲಿಸಬೇಕು.

### ವಸತಿ ಶಾಲೆಗಳಿಗೆ ಪ್ರವೇಶ ನೀಡುವ ವೇಳಾಪಟ್ಟಿ (ತಾತ್ಕಾಲಿಕ)

| | | |
|---|---|---|
| 1 | ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸುವ ಪ್ರಕಟಣೆ ಹೊರಡಿಸುವ ದಿನಾಂಕ | **ಶೈಕ್ಷಣಿಕ ವರ್ಷದ ಪ್ರಾರಂಭದ ದಿನಾಂಕ ಅನುಗುಣವಾಗಿ ಪ್ರವೇಶ ಪೂರ್ವ ಪರೀಕ್ಷೆ/ ದಾಖಲಾತಿಗಾಗಿ ಅಧಿಸೂಚನೆ ಹೊರಡಿಸಿ ಪ್ರಕ್ರಿಯೆ ನಡೆಸಲು ಸೂಕ್ತ ಕ್ರಮ ಕೈಗೊಳ್ಳುವುದು.** |
| 2 | ಅರ್ಜಿ ಸಲ್ಲಿಸಲು ನಿಗದಿಪಡಿಸುವ ಕಡೆಯ ದಿನಾಂಕ | |
| 3 | ಅರ್ಜಿಗಳ ಪರಿಶೀಲನೆ ಮಾಡಿ ಲಿಖಿತ ಪರೀಕ್ಷೆ ನಡೆಸುವ ದಿನಾಂಕ | |
| 4 | ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿ ಮೌಖಿಕ ಪರೀಕ್ಷೆ ನಡೆಸುವ ದಿನಾಂಕ | |
| 5 | ಆಯ್ಕೆ ಪಟ್ಟಿ ಪ್ರಕಟಿಸುವುದು. | |
| 6 | ವಸತಿ ಶಾಲೆಯನ್ನು ಪ್ರಾರಂಭಿಸುವುದು | |

## (೨.೨) ಪದವಿ ಪೂರ್ವ ವಸತಿ ಸಹಿತ ಕಾಲೇಜುಗಳು:-

ರಾಜ್ಯದಲ್ಲಿ ಅಲ್ಪಸಂಖ್ಯಾತರ ಸಮುದಾಯದ ಹೆಣ್ಣುಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ದೃಷ್ಟಿಯಿಂದ ಎಸ್.ಎಸ್.ಎಲ್.ಸಿ ನಂತರ ಪದವಿ ಪೂರ್ವ 11ನೇ ಮತ್ತು 12ನೇ ತರಗತಿಯವರೆಗೆ (ಪಿಯುಸಿ) ವ್ಯಾಸಂಗ ಮಾಡಲು ಪದವಿ ಪೂರ್ವ ವಸತಿ ಕಾಲೇಜು ಅನ್ನು ಸಿಬ್ಬಂದಿ ವರ್ಗದವರೊಂದಿಗೆ ಸೃಜಿಸಿ, ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

## ಅ) ಅಲ್ಪಸಂಖ್ಯಾತರ ವಸತಿ ಸಹಿತ ಕಾಲೇಜುಗಳನ್ನು ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1) ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ ರೂ.1,೫50/- ರ ವೆಚ್ಚದಲ್ಲಿ ಆಹಾರ ನೀಡಿಕೆ.
2) ಉಚಿತ ವಸತಿ ಸೌಲಭ್ಯ.
3) ಪ್ರತಿ ವಿದ್ಯಾರ್ಥಿಗೆ ಎರಡು ಜೊತೆ ಸಮವಸ್ತ್ರ ಬೂಟು, ಕಾಲುಚೀಲ ಪೂರೈಕೆ.
4) ಪ್ರತಿ ವಿದ್ಯಾರ್ಥಿಗೆ ವರ್ಷಕ್ಕೆ ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿ ನೀಡಿಕೆ.
5) ಪ್ರತಿ ವಿದ್ಯಾರ್ಥಿಗೆ ವರ್ಷಕ್ಕೆ ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿ ನೀಡಿಕೆ.
6) ಶೌಚಾಲಯಗಳ ಸ್ವಚ್ಛತೆಗಾಗಿ ಪ್ರತಿ ವಸತಿ ಕಾಲೇಜಿಗೆ ಮಾಹೆಯಾನ ರೂ.1,600/- ರಂತೆ 10 ತಿಂಗಳಿಗೆ.
7) ಪ್ರತಿ ನಿಲಯಕ್ಕೆ ೨ ದಿನಪತ್ರಿಕೆಗಳ ಪೂರೈಕೆ.
8) ಕಟ್ಟಡಗಳ ಬಾಡಿಗೆ ಲೋಕೋಪಯೋಗಿ ಇಲಾಖೆ ನಿಗದಿಪಡಿಸಿದ ನಂತರ ಆಡಳಿತಾತ್ಮಕ ಅನುಮೋದನೆ ನೀಡಿದ ದರದಲ್ಲಿ ಪಾವತಿಸುವುದು.

## ಆ) ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಸಹಿತ ಕಾಲೇಜುಗಳ ಪ್ರವೇಶಕ್ಕಾಗಿ ಅನುಸರಿಸುವ ಮಾನದಂಡಗಳು:

1. ಪದವಿ ಪೂರ್ವ ವಸತಿ ಕಾಲೇಜುಗಳಲ್ಲಿ ಭಾಷಾ ವಿಷಯಗಳನ್ನು ಹೊರತುಪಡಿಸಿ ಉಳಿದ ವಿಷಯಗಳನ್ನು ಆಂಗ್ಲ ಮಾಧ್ಯಮದಲ್ಲಿ ಪರಿಗಣಿಸತಕ್ಕದ್ದು.
2. ಮೊರಾರ್ಜಿ ದೇಸಾಯಿ ವಸತಿ ಕಾಲೇಜುಗಳಲ್ಲಿ ವಿವಿಧ ವರ್ಗದ ವಿದ್ಯಾರ್ಥಿಗಳ ಪ್ರವೇಶಾತಿಗಾಗಿ ಜಾರಿಯಲ್ಲಿರುವ ಮೀಸಲಾತಿ ಅನುಪಾತವು ಈ ಪದವಿ ಪೂರ್ವ ಕಾಲೇಜುಗಳಿಗೂ ಅನ್ವಯವಾಗುತ್ತದೆ.
3. ಯಾವುದೇ ಪದವಿ ಪೂರ್ವ ಕೋರ್ಸಿಗೆ ನಿಗದಿಪಡಿಸಿದ ಸೀಟುಗಳಲ್ಲಿ ಶೇಕಡ 100 ರಷ್ಟನ್ನು ಹುಡುಗಿಯರಿಗೆ ಮೀಸಲಾಗಿಡತಕ್ಕದ್ದು.
4. ಯಾವುದೇ ಜಿಲ್ಲೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತೀರ್ಣರಾದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ಪರೀಕ್ಷೆ ನಡೆಸಿ ಸಂಬಂಧಪಟ್ಟ ಜಿಲ್ಲೆಯಲ್ಲಿ ಪ್ರಾರಂಭಿಸುವ ಪದವಿ ಪೂರ್ವ ಕಾಲೇಜಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡತಕ್ಕದ್ದು. ಆದರೆ ಯಾವುದೇ ಜಿಲ್ಲೆಯಲ್ಲಿ ಆ ಜಿಲ್ಲೆಗೆ ಸೇರಿದ ಸಾಕಷ್ಟು ವಿದ್ಯಾರ್ಥಿಗಳು ಲಭ್ಯವಾಗದಿದ್ದಲ್ಲಿ ಇಲಾಖಾ ಪ್ರವೇಶ ಪರೀಕ್ಷೆಗೆ ಹಾಜರಾದ ಇತರೆ ಜಿಲ್ಲೆಗಳ ಅಭ್ಯರ್ಥಿಗಳನ್ನು ಪರಿಗಣಿಸಬಹುದು.
5. ಈ ವಸತಿ ಕಾಲೇಜುಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ರೂ. 2.50 ಲಕ್ಷ ಮೀರಿರಬಾರದು.
6. ಪದವಿ ಪೂರ್ವ ಕೋರ್ಸುಗಳಿಗೆ ಸಂಬಂಧಿಸಿದಂತೆ ಯಾವುದೇ ಇತರೆ ವಿಷಯದಲ್ಲಿ ಸೂಚನೆಗಳು ಇರದೇ ಇದ್ದಲ್ಲಿ ಹಾಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಜಾರಿಯಲ್ಲಿರುವ ಆದೇಶ ಮತ್ತು ನಿಯಮಗಳನ್ನು ಪಾಲಿಸತಕ್ಕದ್ದು.

## ಅಲ್ಪಸಂಖ್ಯಾತರ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳು (ಸಿ.ಬಿ.ಎಸ್.ಸಿ)

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ವಸತಿ ಶಾಲೆಗಳನ್ನು ಅಲ್ಪಸಂಖ್ಯಾತರ ಪದವಿ ಪೂರ್ವ ವಸತಿ ಕಾಲೇಜುಗಳೊಂದಿಗೆ ಒಂದುಗೂಡಿಸಿ **ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ** ಗಳೆಂದು ಮರುನಾಮಕರಣ ಮಾಡಿ ಸಿ.ಬಿ.ಎಸ್.ಇ. ಪಠ್ಯಕ್ರಮಕ್ಕೆ ಒಳಪಡಿಸಲು ಮಾನ್ಯತೆ ಪಡೆಯಲು ಉದ್ದೇಶಿಸಲಾಗಿದೆ.

## ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

(1) ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ ರೂ. 1,850/- ರ ವೆಚ್ಚದಲ್ಲಿ ಆಹಾರ ನೀಡಿಕೆ.

(2) ಉಚಿತ ವಸತಿ ಸೌಲಭ್ಯ.

(3) ಪ್ರತಿ ವಿದ್ಯಾರ್ಥಿಗೆ ಎರಡು ಜೊತೆ ಸಮವಸ್ತ್ರ ಬೂಟು, ಕಾಲುಚೀಲ ಪೂರೈಕೆ.

(4) ಪ್ರತಿ ಬಾಲಕ ವಿದ್ಯಾರ್ಥಿಗೆ ಮೂರು ತಿಂಗಳಿಗೊಮ್ಮೆ ರೂ 60/- ರಂತೆ ಕ್ಷೌರದ ವೆಚ್ಚ ನೀಡಿಕೆ (5 ಬಾರಿ ಮಾತ್ರ)

(5) ಪ್ರತಿ ವಿದ್ಯಾರ್ಥಿಗೆ ವರ್ಷಕ್ಕೆ ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿ ನೀಡಿಕೆ.

(6) ಪ್ರತಿ ವಿದ್ಯಾರ್ಥಿಗೆ ಉಚಿತವಾಗಿ ಸೋಪ್ ಕಿಟ್ (ಟೂಥ್‌ಪೇಸ್ಟ್, ಸೋಪ್, ಬ್ರಷ್, ಎಣ್ಣೆ)

(7) ಪ್ರತಿ ವಿದ್ಯಾರ್ಥಿಗೆ ಉಚಿತವಾಗಿ ವೈದ್ಯಕೀಯ ಸೌಲಭ್ಯ ಹಾಸಿಗೆ ಹೊದಿಕೆ, ಟ್ರಂಕ್, ಕಾಟ್, ಪ್ರಯೋಗ ಶಾಲೆ ಉಪಕರಣ, ಭೋಧನಾ ಸಲಕರಣೆ, ಕ್ರೀಡಾ ಸಾಮಾಗ್ರಿ, ಗ್ರಂಥಾಲಯಗಳ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

(8) ಶೌಚಾಲಯಗಳ ಸ್ವಚ್ಛತೆಗಾಗಿ ಪ್ರತಿ ವಸತಿ ಶಾಲೆಗೆ ಮಾಹೆಯಾನ ರೂ. 1,600/- ರಂತೆ 10 ತಿಂಗಳಿಗೆ.

(9) ಪ್ರತಿ ನಿಲಯಕ್ಕೆ 2 ದಿನಪತ್ರಿಕೆಗಳ ಪೂರೈಕೆ.

(10) ಕಟ್ಟಡಗಳ ಬಾಡಿಗೆ ಲೋಕೋಪಯೋಗಿ ಇಲಾಖೆ ನಿಗದಿಪಡಿಸಿದ ನಂತರ ಆಡಳಿತಾತ್ಮಕ ಅನುಮೋದನೆ ನೀಡಿದ ದರದಲ್ಲಿ ಪಾವತಿಸುವುದು.

## ೩) ಮೌಲಾನಾ ಅಜಾದ್ ಮಾದರಿ ವಸತಿ ಶಾಲೆಗಳ ನಿರ್ವಹಣೆ:-

ಲೆಕ್ಕಶೀರ್ಷಿಕೆ 2225-04-277-0-09 ರಾಜ್ಯ ವಲಯ

2024-25ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯ ರೂ.11765.80 ಲಕ್ಷಗಳು

250 ಮೌಲಾನಾ ಅಜಾದ್ ಮಾದರಿ ಶಾಲೆಗಳನ್ನು 60 ಸಂಖ್ಯಾಬಲದೊಂದಿಗೆ 6ನೇ ತರಗತಿಯಿಂದ ಆಂಗ್ಲ ಮಾಧ್ಯಮದಲ್ಲಿ ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ.

**ಷರತ್ತುಗಳು;-**

1. ಪ್ರಸ್ತುತ ಮಂಜೂರು ಮಾಡಿರುವ ಮೌಲಾನಾ ಅಜಾದ್ ಮಾದರಿ ಶಾಲೆಗಳನ್ನು ಪ್ರಾರಂಭಿಸಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು ರವರು ಕ್ರಮ ಕೈಗೊಂಡು ಈ ಕೆಳಕಂಡ ಷರತ್ತುಗಳನ್ವಯ ನಿರ್ವಹಿಸತಕ್ಕದ್ದು.
2. ಸದರಿ ಶಾಲೆಗಳನ್ನು ಈಗಾಗಲೇ ವಿದ್ಯಾರ್ಥಿಗಳ ಕೊರತೆಯಿಂದ ಮುಚ್ಚಲಟ್ಟಿರುವ ಸರ್ಕಾರಿ ಉರ್ದು ಶಾಲೆ ಅಥವಾ ಕಡಿಮೆ ವಿದ್ಯಾರ್ಥಿಗಳು ಇರುವ ಉರ್ದು ಶಾಲೆಗಳಲ್ಲಿ ಪ್ರಾರಂಭಿಸಲು ಆದ್ಯತೆ ನೀಡುವುದು.
3. ಉರ್ದು ಶಾಲೆ ಲಭ್ಯವಿಲ್ಲದ ಸಂದರ್ಭದಲ್ಲಿ ಅಲ್ಪಸಂಖ್ಯಾತರ ಖಾಲಿ ಇರುವ ಕಟ್ಟಡದಲ್ಲಿ ಅಥವಾ ಬಾಡಿಗೆ ಕಟ್ಟಡದಲ್ಲಿ ಪ್ರಾರಂಭಿಸುವುದು.
4. ಪ್ರಥಮ ವರ್ಷದಲ್ಲಿ 6ನೇ ತರಗತಿಯಿಂದ ಆಂಗ್ಲ ಮಾಧ್ಯಮದಲ್ಲಿ ಪ್ರಾರಂಭಿಸಿ ನಂತರ ವರ್ಷಗಳಲ್ಲಿ 10ನೇ ತರಗತಿಯವರೆಗೆ ವಿಸ್ತರಿಸುವುದು.
5. ಸದರಿ ಶಾಲೆಗಳಲ್ಲಿ ಪ್ರತಿ ತರಗತಿಗೆ 60 ಸಂಖ್ಯಾಬಲ ಮಂಜೂರು ಮಾಡಲಾಗಿದ್ದು, ದಾಖಲಾತಿಗಳನ್ನು ಶೇ 75% ರಷ್ಟು ಅಲ್ಪಸಂಖ್ಯಾತರ ಸಮುದಾಯಗಳಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ವಿದ್ಯಾರ್ಥಿಗಳಿಗೆ ಹಾಗೂ ಶೇ 25% ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಈಗಾಗಲೇ ಅಲ್ಪಸಂಖ್ಯಾತರ ವಸತಿ ಶಾಲೆಗಳಲ್ಲಿ ನಿಗದಿಪಡಿಸಿರುವ ಅನುಪಾತದಲ್ಲಿ ಪ್ರವೇಶ ಪಡೆಯುವುದು ಹಾಗೂ ಪ್ರತಿ ತರಗತಿಯಲ್ಲಿ ಹೆಣ್ಣು ಮಕ್ಕಳಿಗೆ ಶೇ 50% ಮೀಸಲಿರಿಸುವುದು.
6. ಪ್ರತಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲೇ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಸಮವಸ್ತ್ರ, ಶುದ್ಧ ಕುಡಿಯುವ ನೀರಿನ ಘಟಕ, ಟೇಬಲ್, ಚೇರ್, ಲೇಖನ ಸಾಮಗ್ರಿ, ಕಂಪ್ಯೂಟರ್, ಪ್ರಿಂಟರ್, ಯು.ಪಿ.ಎಸ್‌ಗಳನ್ನು ಅಳವಡಿಸುವುದು ಸಿ.ಸಿ ಕ್ಯಾಮರ ಅಳವಡಿಸುವುದು ಇತ್ಯಾದಿಗಳನ್ನು ಪೂರೈಸತಕ್ಕದ್ದು.
7. ಸರ್ಕಾರಿ ಶಾಲೆಗಳಲ್ಲಿ ನೀಡುವ ಮಧ್ಯಾಹ್ನ ಉಪಹಾರ ಮತ್ತು ಕ್ಷೀರ ಭಾಗ್ಯ ಯೋಜನೆ ಮಾದರಿಯಲ್ಲಿ ಈ ಶಾಲೆಗಳಲ್ಲಿಯೂ ಸೌಲಭ್ಯ ಒದಗಿಸುವುದು.

8. ಕಾಲ ಕಾಲಕ್ಕೆ ವಸತಿ ಶಾಲೆಗಳಿಗೆ ಒದಗಿಸಿದ ಅನುದಾನದಲ್ಲಿ ನಿರ್ವಹಣೆ ವೆಚ್ಚ, ಸಿಬ್ಬಂದಿ ವೇತನ, ಎಲ್ಲಾ ಮೂಲಭೂತ ಸೌಕರ್ಯ ನೀಡತಕ್ಕದ್ದು.

9. ಪ್ರತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಭೋಧಕ ಮತ್ತು ಭೋಧಕೇತರ ಸಿಬ್ಬಂದಿಗಳಿಗೆ ಕಾಲ ಕಾಲಕ್ಕೆ ತರಬೇತಿಯನ್ನು ನೀಡತಕ್ಕದ್ದು.

10. ಈ ಶಾಲೆಗಳನ್ನು ನಿರ್ಮಿಸಲು ಅಗತ್ಯವಾದ ನಿವೇಶನ ಮತ್ತು ಭೂಮಿಯನ್ನು ಸರ್ಕಾರಿ, ಅರೆ ಸರ್ಕಾರಿ ಅಥವಾ ಖಾಸಗಿಯವರಿಂದ ಪಡೆದುಕೊಳ್ಳಲು, ಕಟ್ಟಡ ನಿರ್ಮಿಸಲು ನಿರ್ದೇಶಕರು ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು ರವರು ಕ್ರಮವಹಿಸತಕ್ಕದ್ದು.

11. ಖಾಯಂ ಭೋಧಕ/ಭೋಧಕೇತರ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಕ್ರಮವಹಿಸತಕ್ಕದ್ದು. ಖಾಯಂ ಸಿಬ್ಬಂದಿ ನೇಮಕವಾಗುವವರೆಗೆ ಹೊರಗುತ್ತಿಗೆ /ಶಿಕ್ಷಣ ಇಲಾಖೆ ಮಾದರಿಯಲ್ಲಿ ಅತಿಥಿ ಶಿಕ್ಷಕ/ಸಿಬ್ಬಂದಿಯನ್ನು ಪಡೆದು ನಡೆಸಲು ಕ್ರಮವಹಿಸತಕ್ಕದ್ದು.

12. ಉರ್ದು ಶಾಲೆ ಸ್ವಂತ ಕಟ್ಟಡ ಇರುವ ಕಡೆ ಹೆಚ್ಚುವರಿ ಕೊಠಡಿ, ಶೌಚಾಲಯ, ಕಾಂಪೌಂಡ್ ಗೋಡೆ, ಸುಣ್ಣ ಬಣ್ಣ ಹಾಗೂ ಇತರೆ ಅಗತ್ಯ ದುರಸ್ಥಿಗಾಗಿ ನಿರ್ದೇಶಕರು ಕ್ರಮವಹಿಸತಕ್ಕದ್ದು.

## 4) ವಿದ್ಯಾರ್ಥಿ ನಿಲಯಗಳ ನಿರ್ವಹಣೆ:

ಲೆಕ್ಕಶೀರ್ಷಿಕೆ 2225-00-103-0-34

2024-25ನೇ ಸಾಲಿನ ಆಯವ್ಯಯ ರೂ.**10512.75** ಲಕ್ಷಗಳು

### (ಅ) ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು:-

ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳು ಅವರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮುಂದುವರೆಸಲು ಪ್ರೋತ್ಸಾಹಿಸುವ ಸಲುವಾಗಿ ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿ ನಿರ್ವಹಿಸಲಾಗುತ್ತಿದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ 36 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿದ್ದು, (15 ಬಾಲಕರು ಮತ್ತು 21 ಬಾಲಕಿಯರು) ಇವುಗಳಲ್ಲಿ ಕ್ರಮವಾಗಿ 750 ಹಾಗೂ 1075 ಹೀಗೆ ಒಟ್ಟು 1825 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ.

### (ಆ) ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳು :

ಮತೀಯ ಅಲ್ಪಸಂಖ್ಯಾತರ ಬಾಲಕ/ಬಾಲಕಿಯರ ಶಿಕ್ಷಣಕ್ಕೆ ಅನುಕೂಲವಾಗುವಂತೆ ವಿದ್ಯಾರ್ಥಿ ನಿಲಯಗಳನ್ನು ವಿವಿಧ ಜಿಲ್ಲೆಗಳು ಮತ್ತು ತಾಲ್ಲೂಕುಗಳಲ್ಲಿ ಮಂಜೂರಾಗಿದ್ದು ಕಾರ್ಯನಿರ್ವಹಿಸುತ್ತಿವೆ. 5ನೇ ತರಗತಿಯಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಬಾಲಕ/ಬಾಲಕಿಯರು ಈ ವಿದ್ಯಾರ್ಥಿನಿಲಯಗಳ ಸೌಲಭ್ಯವನ್ನು ಪಡೆಯುವರು. ಈ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಕೆಳಕಂಡ ಸವಲತ್ತುಗಳನ್ನು ನೀಡಲಾಗುತ್ತಿದೆ.

1. ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.1,750/-ರ ವೆಚ್ಚದಲ್ಲಿ 10 ತಿಂಗಳ ಅವಧಿಗೆ ಆಹಾರ ನೀಡಿಕೆ.
2. ಉಚಿತ ವಸತಿ ಸೌಕರ್ಯ.
3. ಪ್ರತಿ ವಿದ್ಯಾರ್ಥಿಗೆ ಎರಡು ಜೊತೆ ಸಮವಸ್ತ್ರ ಪೂರೈಕೆ.
4. ಪ್ರತಿ ವಿದ್ಯಾರ್ಥಿಗೆ ಉಚಿತ 10 ತಿಂಗಳ ಅವಧಿಗೆ ಇತರೆ ವೆಚ್ಚ.
5. ಪ್ರತಿ ಬಾಲಕ ವಿದ್ಯಾರ್ಥಿಗೆ ಮೂರು ತಿಂಗಳಿಗೊಮ್ಮೆ ರೂ 60/- ರಂತೆ ಕ್ಷೌರದ ವೆಚ್ಚ ನೀಡಿಕೆ (5 ಬಾರಿ ಮಾತ್ರ)
6. ಪ್ರತಿ ವಿದ್ಯಾರ್ಥಿನಿಲಯಕ್ಕೆ ಉಚಿತ 10 ತಿಂಗಳ ಅವಧಿಗೆ ವೈದ್ಯಕೀಯ ವೆಚ್ಚ ನೀಡಿಕೆ.
7. ಪ್ರತಿ ವಿದ್ಯಾರ್ಥಿಗೆ ಉಚಿತ ಹಾಸಿಗೆ ಹೊದಿಕೆ ಸರಬರಾಜು.

8. ಪ್ರತಿ ವಿದ್ಯಾರ್ಥಿನಿಲಯಕ್ಕೆ ವರ್ಷಕ್ಕೆ ವಾರ್ತಾ ಪತ್ರಿಕೆ ಮತ್ತು ನಿಯತಕಾಲಿಕೆ ಖರೀದಿ (ವಾಸ್ತವಿಕ ದರ)
9. ಶೌಚಾಲಯಗಳ ಸ್ವಚ್ಛತೆಗಾಗಿ ಪ್ರತಿ ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ ರೂ.1,500/- ರಂತೆ 10 ತಿಂಗಳಿಗೆ.
10. ಕ್ರೀಡಾ ಸಾಮಗ್ರಿಗಳು ಪ್ರತಿ ವರ್ಷಕ್ಕೊಮ್ಮೆ ಪ್ರತಿ ನಿಲಯಕ್ಕೆ ಒಂದು ಸೆಟ್ ವಾಸ್ತವ ದರದಲ್ಲಿ.

## (ಇ) ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಅನುಸರಿಸುವ ಮಾನದಂಡಗಳು:-

1. ವಿದ್ಯಾರ್ಥಿಗಳು ಮತೀಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ್ದು ರಾಜ್ಯದ ನಿವಾಸಿಯಾಗಿರಬೇಕು.
2. ವಿದ್ಯಾರ್ಥಿಗಳು ಸರ್ಕಾರಿ ಅಥವಾ ಅಂಗೀಕೃತ ಶಾಲೆಗಳಲ್ಲಿ ಮೆಟ್ರಿಕ್ ಪೂರ್ವ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರಬೇಕು.
3. ಈ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ರೂ.2.50 ಲಕ್ಷ ಮೀರಿರಬಾರದು.
4. ಪ್ರತಿ ವಿದ್ಯಾರ್ಥಿನಿಲಯಗಳಲ್ಲಿ ಶೇ.75 ರಷ್ಟು ಸ್ಥಾನಗಳನ್ನು ಅಲ್ಪಸಂಖ್ಯಾತರ ಜನಾಂಗದ ವಿದ್ಯಾರ್ಥಿಗಳಿಗೆ ಹಾಗೂ ಶೇ.25 ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ನೀಡುವುದು.
5. ಪ್ರತಿ ವಿದ್ಯಾರ್ಥಿನಿಲಯಗಳಲ್ಲಿ ಮುಸ್ಲಿಂ-ಶೇ.82, ಕ್ರಿಶ್ಚಿಯನ್ ಶೇ.12, ಜೈನ್ ಶೇ.4 ಬೌದ್ಧ ಶೇ.1 ಮತ್ತು ಸಿಖ್‌ರಿಗೆ ಶೇ. 1ರಷ್ಟು ಪ್ರವೇಶ ನೀಡುವುದು. ನಿರ್ದಿಷ್ಟ ಜನಾಂಗದ ವಿದ್ಯಾರ್ಥಿಗಳಿಂದ ಮೇಲಿನ ಪ್ರಮಾಣದಲ್ಲಿ ಅರ್ಜಿಗಳು ಬಾರದಿದ್ದಲ್ಲಿ ಲಭ್ಯವಿರುವ ಇತರೆ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಂದ ಭರ್ತಿ ಮಾಡತಕ್ಕದ್ದು.
6. ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಪಡೆಯುವ ಅಭ್ಯರ್ಥಿಗಳು ತಮ್ಮ ಹಿಂದಿನ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಎಲ್ಲಾ ವಿಷಯದಲ್ಲಿ ಉತ್ತೀರ್ಣರಾಗಿರಬೇಕು.
7. State Hostel Portal ಮುಖಾಂತರ ನಿಯಮಾನುಸಾರ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು.

## (ಈ) ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ನೀಡುವ ವೇಳಾಪಟ್ಟಿ :

| | | |
|---|---|---|
| 1 | ನವೀಕರಣ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ದಿನಾಂಕ | **ಶೈಕ್ಷಣಿಕ ವರ್ಷದ ಪ್ರಾರಂಭದ ದಿನಾಂಕ ಅನುಗುಣವಾಗಿ ಆಯ್ಕೆ ಪ್ರಕ್ರಿಯೆ ಅಧಿಸೂಚನೆ ಹೊರಡಿಸಿ ಸಕಾಲದಲ್ಲಿ ದಾಖಲಾತಿ ನೀಡಲು ಸೂಕ್ತ ಕ್ರಮ ಕೈಗೊಳ್ಳುವುದು.** |
| 2 | ಹೊಸ ವಿದ್ಯಾರ್ಥಿಗಳ ಪ್ರವೇಶಕ್ಕೆ ಪ್ರಕಟಣೆ ನೀಡುವ ದಿನಾಂಕ | |
| 3 | ಹೊಸ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | |
| 4 | ಹೊಸ ವಿದ್ಯಾರ್ಥಿಗಳು ಆಯ್ಕೆ ಮಾಡಲು ಸಲ್ಲಿಸಲು ಕೊನೆಯ ದಿನಾಂಕ | |
| 5 | ಪ್ರವೇಶಕ್ಕೆ ನಿಗದಿಪಡಿಸಿದ ಕೊನೆಯ ದಿನಾಂಕ | |

## (ಉ) ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು:

ಸರ್ಕಾರಿ /ಸರ್ಕಾರಿ ಅಂಗೀಕೃತ ಶಿಕ್ಷಣ ಸಂಸ್ಥೆಗಳಲ್ಲಿ ಮೆಟ್ರಿಕ್ ನಂತರದ ಕೋರ್ಸುಗಳಾದ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ, ಎಂಬಿಬಿಎಸ್, ಡಿಪ್ಲೋಮ, ವೃತ್ತಿಶಿಕ್ಷಣ ಇತ್ಯಾದಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗಾಗಿ 365 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದ್ದು, (217 ಬಾಲಕರು ಹಾಗೂ 148 ಬಾಲಕಿಯರು) ಇವುಗಳಲ್ಲಿ ಕ್ರಮವಾಗಿ 17075 ಹಾಗೂ 12275 ಹೀಗೆ ಒಟ್ಟು 29350 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ.

**(ಆ) ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.**

1. ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.1,850/-ರ ವೆಚ್ಚದಲ್ಲಿ 10 ತಿಂಗಳ ಅವಧಿಗೆ ಆಹಾರ ನೀಡಿಕೆ.
2. ಉಚಿತ ವಸತಿ ಸೌಕರ್ಯ.
3. ಪ್ರತಿ ವಿದ್ಯಾರ್ಥಿನಿಲಯಕ್ಕೆ 10 ತಿಂಗಳ ಅವಧಿಗೆ ಸಾದಿಲ್ವಾರು ವೆಚ್ಚ ಭರಿಸುವುದು.
4. ಶೌಚಾಲಯಗಳ ಸ್ವಚ್ಛತೆಗಾಗಿ ಪ್ರತಿ ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ ರೂ.1,500/- ರಂತೆ 10 ತಿಂಗಳಿಗೆ.
5. ಪ್ರತಿ ನಿಲಯಕ್ಕೆ 2 ದಿನಪತ್ರಿಕೆಗಳ ಪೂರೈಕೆಗಾಗಿ (ಒಂದು ಆಂಗ್ಲ ಭಾಷೆ ಹಾಗೂ ಒಂದು ಕನ್ನಡ ದಿನಪತ್ರಿಕೆಗಳು ವಾಸ್ತವಿಕ ವೆಚ್ಚದಲ್ಲಿ.
6. ಕಟ್ಟಡಗಳ ಬಾಡಿಗೆ ಲೋಕೋಪಯೋಗಿ ಇಲಾಖೆ ನಿಗದಿಪಡಿಸಿದ ನಂತರ ಆಡಳಿತಾತ್ಮಕ ಅನುಮೋದನೆ ನೀಡಿದ ದರದಲ್ಲಿ ಪಾವತಿಸುವುದು.
7. ಕ್ರೀಡಾ ಸಾಮಗ್ರಿಗಳು ಪ್ರತಿ ವರ್ಷಕ್ಕೊಮ್ಮೆ, ಪ್ರತಿ ನಿಲಯಕ್ಕೆ, ಒಂದು ಸೆಟ್ ವಾಸ್ತವ ದರದಲ್ಲಿ.

**(ಇ) ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ಅನುಸರಿಸುವ ಮಾನದಂಡಗಳು:-**

(1) ವಿದ್ಯಾರ್ಥಿಗಳು ಮತೀಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ್ದು ರಾಜ್ಯದ ನಿವಾಸಿಯಾಗಿರಬೇಕು.

(2) ವಿದ್ಯಾರ್ಥಿಗಳು ಸರ್ಕಾರಿ ಅಥವಾ ಅಂಗೀಕೃತ ಕಾಲೇಜುಗಳಲ್ಲಿ ಮೆಟ್ರಿಕ್ ನಂತರದ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರಬೇಕು.

(3) ಈ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ರೂ. 2.50 ಲಕ್ಷ ಮೀರಿರಬಾರದು.

(4) ಪ್ರತಿ ವಿದ್ಯಾರ್ಥಿನಿಲಯಗಳಲ್ಲಿ ಶೇ.75 ರಷ್ಟು ಸ್ಥಾನಗಳನ್ನು ಅಲ್ಪಸಂಖ್ಯಾತರ ಜನಾಂಗದ ವಿದ್ಯಾರ್ಥಿಗಳಿಗೆ ಹಾಗೂ ಶೇ.25 ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ನೀಡುವುದು.

(5) ಪ್ರತಿ ವಿದ್ಯಾರ್ಥಿನಿಲಯಗಳಲ್ಲಿ ಮುಸ್ಲಿಂ-ಶೇ.82, ಕ್ರಿಶ್ಚಿಯನ್ ಶೇ.12, ಜೈನ್-ಶೇ-4, ಬೌದ್ಧ-ಶೇ.1 ಮತ್ತು ಸಿಖ್‌ರಿಗೆ ಶೇ.1 ರಷ್ಟು ಪ್ರವೇಶ ನೀಡುವುದು. ನಿರ್ದಿಷ್ಟ ಜನಾಂಗದ ವಿದ್ಯಾರ್ಥಿಗಳಿಂದ ಸಾಕಷ್ಟು ಪ್ರಮಾಣದಲ್ಲಿ ಅರ್ಜಿಗಳು ಬಾರದಿದ್ದಲ್ಲಿ ಲಭ್ಯವಿರುವ ಇತರೆ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಂದ ಭರ್ತಿ ಮಾಡತಕ್ಕದ್ದು.

(6) ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಪಡೆಯುವ ಅಭ್ಯರ್ಥಿಗಳು ತಮ್ಮ ಹಿಂದಿನ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಎಲ್ಲಾ ವಿಷಯದಲ್ಲಿ ಉತ್ತೀರ್ಣರಾಗಿರಬೇಕು.

(7) ವಿದ್ಯಾರ್ಥಿನಿಲಯವನ್ನು ಶೈಕ್ಷಣಿಕ ವರ್ಷದ 10 ತಿಂಗಳ ಅವಧಿಗೆ ನಡೆಸಬೇಕು. 10 ತಿಂಗಳ ನಂತರವೂ ವಾರ್ಷಿಕ ಪರೀಕ್ಷೆಗಳು ನಡೆದಲ್ಲಿ ಈ ಅವಧಿಯನ್ನು ವಿಸ್ತರಿಸಲಾಗುವುದು.

(8) State Hostel Portal ಮುಖಾಂತರ ನಿಯಮಾನುಸಾರ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು.

## (ಋ) ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ನೀಡುವ ವೇಳಾಪಟ್ಟಿ:

<table>
<tr><td>೧</td><td>ನವೀಕರಣ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ದಿನಾಂಕ</td><td rowspan="7">ಶೈಕ್ಷಣಿಕ ವರ್ಷದ ಪ್ರಾರಂಭದ ದಿನಾಂಕ ಅನುಗುಣವಾಗಿ ಆಯ್ಕೆ ಪ್ರಕ್ರಿಯೆ ಅಧಿಸೂಚನೆ ಹೊರಡಿಸಿ ಸಕಾಲದಲ್ಲಿ ದಾಖಲಾತಿ ನೀಡಲು ಸೂಕ್ತ ಕ್ರಮ ಕೈಗೊಳ್ಳುವುದು.</td></tr>
<tr><td>೨</td><td>ಹೊಸ ವಿದ್ಯಾರ್ಥಿಗಳ ಪ್ರವೇಶಕ್ಕೆ ಪ್ರಕಟಣೆ ನೀಡುವ ದಿನಾಂಕ</td></tr>
<tr><td>೩</td><td>ಹೊಸ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ</td></tr>
<tr><td>೪</td><td>ವಿದ್ಯಾರ್ಥಿ ಸಲ್ಲಿಸುವ ಅರ್ಜಿಯನ್ನು, ವಿದ್ಯಾರ್ಥಿಯು ವ್ಯಾಸಂಗ ಮಾಡುತ್ತಿರುವ ಕಾಲೇಜಿನ ಪ್ರಾಂಶುಪಾಲರಿಂದ ದೃಢೀಕರಿಸಿ, ದಾಖಲೆಗಳೊಂದಿಗೆ, ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ</td></tr>
<tr><td>೫</td><td>ಹೊಸ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು, ಆಯ್ಕೆ ಸಮಿತಿಯು ಸಭೆ ಸೇರುವ ದಿನಾಂಕ</td></tr>
<tr><td>೬</td><td>ಆಯ್ಕೆ ಸಮಿತಿಯ ಪಟ್ಟಿ ಪ್ರಕಟಿಸುವ ದಿನಾಂಕ</td></tr>
<tr><td>೭</td><td>ಆಯ್ಕೆಯಾದ ವಿದ್ಯಾರ್ಥಿಗಳು, ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಪಡೆಯುವ ಕೊನೆಯ ದಿನಾಂಕ</td></tr>
</table>

## (೫) ಉದ್ಯೋಗಸ್ಥ ಮಹಿಳೆಯರಿಗಾಗಿ ಹಾಸ್ಟೆಲ್‌ಗಳು:-

ಬೆಂಗಳೂರು ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಗಳಲ್ಲಿ ದುಡಿಯುವ ಮಹಿಳೆಯರ ಸುರಕ್ಷತೆಯ ದೃಷ್ಟಿಯಿಂದ ಮಹಿಳೆಯರಿಗಾಗಿ ರೂ.೨.೦೦ ಕೋಟಿಗಳ ವೆಚ್ಚದಲ್ಲಿ ೧೦ ಉದ್ಯೋಗಸ್ಥ ಮಹಿಳೆಯ ಹಾಸ್ಟೆಲ್‌ಗಳನ್ನು ತೆರೆಯಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ.

## (ಅ) ಅಲ್ಪಸಂಖ್ಯಾತರ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಲ್ಲಿ ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡಲು ಮಂಜೂರಾದ ಏಕರೂಪ ಹುದ್ದೆಗಳ ವಿವರ.

| ಕ್ರ. ಸಂ | ಹುದ್ದೆಗಳ ಪದನಾಮ | ಸೃಜಿಸಬೇಕಾದ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| ೧. | ನಿಲಯ ಪಾಲಕರು (ಮಹಿಳೆ) | ೧೦ | ಸಿ-ಆರ್ ನಿಯಮದಂತೆ |
| ೨. | ಅಡುಗೆಯವರು | ೨೦ | ಹೊರಗುತ್ತಿಗೆ |
| ೩. | ಅಡುಗೆ ಸಹಾಯಕರು | ೧೦ | ಹೊರಗುತ್ತಿಗೆ |
| ೪. | ಕಾವಲುಗಾರರು | ೨೦ | ಹೊರಗುತ್ತಿಗೆ |
| **ಒಟ್ಟು** | | **60** | |

**ಷರತ್ತುಗಳು:-**

1. ಪ್ರಸ್ತುತ ಮಂಜೂರು ಮಾಡಿರುವ ಉದ್ಯೋಗಸ್ಥ ಅಲ್ಪಸಂಖ್ಯಾತ ಮಹಿಳೆಯರ ವಸತಿ ನಿಲಯಗಳನ್ನು ಪ್ರಾರಂಭಿಸಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
2. ಅಲ್ಪಸಂಖ್ಯಾತ ಸಮುದಾಯದ ಕಾರ್ಯನಿರತ, ಒಂಟಿ ಮಹಿಳೆಗೆ, ಅವಿವಾಹಿತ ಮಹಿಳೆಗೆ, ವಿಧವೆಯರಿಗೆ, ವಿವಾಹ ವಿಚ್ಛೇದಿತ ಮಹಿಳೆಗೆ ಪತಿಯಿಂದ ಬೇರ್ಪಟ್ಟ ಮಹಿಳೆಗೆ ಹಾಗೂ ಮಹಿಳೆಯ ಪತಿ ಬೇರೊಂದು ಸ್ಥಳದಲ್ಲಿ ವಾಸಿಸುವ ವಿವಾಹಿತ ಮಹಿಳೆಗೆ ವಸತಿ ಒದಗಿಸುವುದು ಮತ್ತು ಇವರ ವಯಸ್ಸು ಕನಿಷ್ಠ ೧೮ ವರ್ಷ ಮೇಲ್ಪಟ್ಟು ಇರಬೇಕು.

3. ಅಲ್ಪಸಂಖ್ಯಾತ ಸಮುದಾಯದ ಉದ್ಯೋಗಸ್ಥ ಮಹಿಳೆ ಮತ್ತು ಪತಿ ಬೇರೊಂದು ಸ್ಥಳದಲ್ಲಿ ವಾಸಿಸುವ ಉದ್ಯೋಗಸ್ಥ ವಿವಾಹಿತ ಮಹಿಳೆಗೆ ವಸತಿ, ಆರೋಗ್ಯಕರ ವಾತಾವರಣ, ಸುರಕ್ಷತೆ, ಭದ್ರತೆ ಒದಗಿಸುವುದು.

4. ಕಾರ್ಯನಿರತ ಮಹಿಳೆಯರ ವಸತಿ ನಿಲಯಗಳಲ್ಲಿ ವಸತಿ ಲಭ್ಯವಿದ್ದಲ್ಲಿ, ಕಾರ್ಯನಿರತ ಅಲ್ಪಸಂಖ್ಯಾತರ ಮಹಿಳೆಯರಿಗೆ ಮೊದಲ ಆದ್ಯತೆ ನೀಡಿದ ನಂತರ, ಅಲ್ಪಸಂಖ್ಯಾತರ ಮಹಿಳಾ ವಿದ್ಯಾರ್ಥಿಗಳಿಗೆ ವಸತಿ ಕಲ್ಪಿಸುವುದು, ಅಲ್ಪಸಂಖ್ಯಾತರ ಮಹಿಳಾ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ವಸತಿ ಸೌಕರ್ಯ ಗರಿಷ್ಠ 5 ವರ್ಷಗಳಿಗೆ ಮಾತ್ರ ನೀಡುವುದು ಹಾಗೂ ವೃತ್ತಿಪರ ಶಿಕ್ಷಣ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಆದ್ಯತೆ ನೀಡುವುದು. ಇವರ ಸಂಖ್ಯೆ ವಸತಿ ನಿಲಯದ ಒಟ್ಟಾರೆ ಸಂಖ್ಯೆಯಲ್ಲಿ ಶೇ ೩೦ಕ್ಕೆ ಮೀರಿರಬಾರದು.

5. ಕಾರ್ಯನಿರತ ಅಲ್ಪಸಂಖ್ಯಾತರ ಮಹಿಳೆಯ ವಸತಿ ನಿಲಯಗಳ ಬಗ್ಗೆ ವ್ಯಾಪಕ ಪ್ರಚಾರ ನೀಡಿ ಅರ್ಜಿಗಳನ್ನು ಆನ್‌ಲೈನ್ (Online) ಮೂಲಕ ಕರೆಯಲು ಕ್ರಮವಹಿಸುವುದು.

6. ಸದರಿ ವಸತಿ ನಿಲಯಗಳು ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯ ನಿರ್ವಹಿಸುವುದು. ಕಾಲ ಕಾಲಕ್ಕೆ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಿಗೆ ಒದಗಿಸಿದ ಅನುದಾನದಲ್ಲಿ ನಿರ್ವಹಣೆ ವೆಚ್ಚ, ಸಿಬ್ಬಂದಿ ವೇತನ, ಎಲ್ಲಾ ಮೂಲಭೂತ ಸೌಕರ್ಯಗಳಾದ ಹಾಸಿಗೆ, ಹೊದಿಕೆ, ಮಂಚ, ಸೋಪ್ ಕಿಟ್, ಕುಡಿಯುವ ನೀರಿನ ಘಟಕ, ಸೋಲಾರ್ ವಾಟರ್ ಹೀಟರ್, ಯು.ಪಿ.ಎಸ್, ಟೇಬಲ್, ಚೇರ್, ಸಿ.ಸಿ ಕ್ಯಾಮರ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.

7. ಉದ್ಯೋಗಕ್ಕಾಗಿ ಸರ್ಕಾರಿ ಇಲಾಖೆಗಳಿಂದ ತರಬೇತಿ ಪಡೆಯುತ್ತಿರುವ ಅಲ್ಪಸಂಖ್ಯಾತ ಮಹಿಳೆಯರಿಗೆ ವಸತಿ ಒದಗಿಸುವುದು. ಈ ವರ್ಗಕ್ಕೆ ಸೇರಿದ ಮಹಿಳೆಯರು ವಸತಿ ನಿಲಯದಲ್ಲಿ ಶೇ.೨೫ಕ್ಕೆ ಮೀರಿರಬಾರದು.

8. ಉದ್ಯೋಗಕ್ಕಾಗಿ ತರಬೇತಿ ಪಡೆಯುವ ಮಹಿಳೆಯರು ತರಬೇತಿಯ ನಂತರ ಉದ್ಯೋಗ ಕಲ್ಪಿಸಿದ್ದಲ್ಲಿ, ಅಂಥಹವರು ಉದ್ಯೋಗಸ್ಥ ಅಲ್ಪಸಂಖ್ಯಾತರ ಮಹಿಳೆಯರ ವಸತಿನಿಲಯಗಳಲ್ಲಿ ವಾಸಿಸಲು ಅರ್ಹರಿರುತ್ತಾರೆ.

9. ನಿಲಯಾರ್ಥಿಗಳು/ವಿದ್ಯಾರ್ಥಿಗಳು ಕಾಲ ಕಾಲಕ್ಕೆ ಇಲಾಖೆಯು ನಿಗಧಿಪಡಿಸಿದ ದರ/ಮಾದರಿಯಂತೆ ಮಾಸಿಕ ಭೋಜನಾ ವೆಚ್ಚ ಸ್ವಂತ ಖರ್ಚಿನಿಂದ ಭರಿಸಬೇಕು.

10. ನಿಲಯಾರ್ಥಿಗಳು/ವಿದ್ಯಾರ್ಥಿಗಳು ಸರ್ಕಾರ, ಇಲಾಖೆ ಕಾಲ ಕಾಲಕ್ಕೆ ಹೊರಡಿಸುವ ವಸತಿ ನಿಲಯಗಳ ನಿರ್ವಹಣೆಗೆ ಸಂಬಂಧಿಸಿದ ಆದೇಶ/ ನಿಯಮ ಮತ್ತು ನಿಬಂಧನೆಗಳನ್ನು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.

11. ಪ್ರತಿ ವಸತಿ ನಿಲಯದ ಸಂಖ್ಯಾಬಲ ಬೆಂಗಳೂರು ನಗರದಲ್ಲಿ ೭೫ ಉಳಿದ ಸ್ಥಳಗಳಲ್ಲಿ ೫೦ ಆಗಿರಬೇಕು.

12. ವಸತಿ ನಿಲಯ ಕಟ್ಟಡ ನಿರ್ಮಿಸಲು ಸರ್ಕಾರಿ ಜಾಗವನ್ನು ಉಚಿತವಾಗಿ ಅಥವಾ ನಗರಾಭಿವೃದ್ಧಿ ಪ್ರಾಧಿಕಾರಗಳ ಮೂಲಕ ವಿನಾಯಿತಿ ದರದಲ್ಲಿ ಅಥವಾ ಖಾಸಗಿಯವರಿಂದ ಪಡೆದು ಕಟ್ಟಡ ನಿರ್ಮಿಸಲು ನಿರ್ದೇಶಕರು ಕ್ರಮವಹಿಸತಕ್ಕದ್ದು.

13. ಅಲ್ಪಸಂಖ್ಯಾತ ಉದ್ಯೋಗಸ್ಥ ಮಹಿಳೆಯರಿಗಾಗಿ ಪ್ರಾರಂಭಿಸಲಾಗುವ 10 ವಸತಿ ನಿಲಯಗಳನ್ನು ನಿರ್ಮಾಣ ಮಾಡುವಾಗ ತಗಲುವ ವೆಚ್ಚ ರೂ. ೨೦ ಕೋಟಿಗಳಿಗೆ ಸಚಿವ ಸಂಪುಟದ ಅನುಮೋದನೆಯನ್ನು ಪಡೆದು ಕೊಳ್ಳತಕ್ಕದ್ದು.

14. ಕರ್ನಾಟಕ ಲೋಕಸೇವಾ ಆಯೋಗ/ಆಯ್ಕೆ ಪ್ರಾಧಿಕಾರ ಮೂಲಕ ಸಿಬ್ಬಂದಿಗಳನ್ನು ನೇಮಕ ಮಾಡಲು ಕ್ರಮವಹಿಸಿ ನೇಮಕಾತಿ ನಂತರ ಮೇಲ್ವಿಚಾರಣೆಯನ್ನು ನಿರ್ದೇಶಕರು ಮಾಡತಕ್ಕದ್ದು.

15. ಖಾಯಂ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಕ್ರಮವಹಿಸತಕ್ಕದ್ದು. ಖಾಯಂ ಸಿಬ್ಬಂದಿ ನೇಮಕವಾಗುವವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಪಡೆದು ನಡೆಸಲು ಕ್ರಮವಹಿಸತಕ್ಕದ್ದು.

## (6) ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಯೋಜನೆ:-

ಲೆಕ್ಕಶೀರ್ಷಿಕೆ 2225-04-277-0-05 (059) ರಾಜ್ಯವಲಯ

2024-25ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯ ರೂ.**1200.00** ಲಕ್ಷಗಳು.

ವಿದ್ಯಾಸಿರಿ ಯೋಜನೆಯು ವಿದ್ಯಾಭ್ಯಾಸ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಮೀಸಲಿರಿಸಲಾಗಿದೆ. ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ (ಪಿ.ಯು.ಸಿ ಯಿಂದ ಪಿ.ಹೆಚ್.ಡಿ ವರೆಗೂ) ಸರ್ಕಾರಿ, ಅನುದಾನ/ಅನುದಾನ ರಹಿತ ಕಾಲೇಜು/ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು ಅಂತಹ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದ ಸೌಕರ್ಯ ತಲುಪದೇ ಇರುವಂತಹ ವಿದ್ಯಾರ್ಥಿಗಳಿಗೆ ಈ ಯೋಜನೆ ಅನುಷ್ಠಾನಗೊಳಿಸಲಾಗಿದೆ.

### ಅರ್ಹತೆ ಮತ್ತು ನಿಬಂಧನೆಗಳು:-

1. ವಿದ್ಯಾರ್ಥಿಯು ಕರ್ನಾಟಕ ರಾಜ್ಯ ನಿವಾಸಿಯಾಗಿರಬೇಕು.
2. ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ವರಮಾನವು 2 ಲಕ್ಷಕ್ಕಿಂತ ಕಡಿಮೆಯಾಗಿರಬೇಕು.
3. ಪ್ರವರ್ಗ-1 ಮತ್ತು ಕ್ರೈಸ್ತ ಸಮುದಾಯಕ್ಕೆ ಪರಿವರ್ತನೆಯಾಗಿರುವ ವಿದ್ಯಾರ್ಥಿಗಳ ವಾರ್ಷಿಕ ವರಮಾನ 2.50 ಕ್ಕಿಂತ ಕಡಿಮೆಯಿರಬೇಕು.
4. ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದವರಾಗಿದ್ದು ಅವರ ನಿಲಯದಿಂದ ಅವರ ಕಾಲೇಜು 5 ಕಿ.ಮೀ ಕಿಂತ ದೂರವಿರಬೇಕು.
5. ವಿದ್ಯಾರ್ಥಿಯು ಅವರ ಹಿಂದಿನ ವರ್ಷದ ಪರೀಕ್ಷೆಗಳಲ್ಲಿ ಯಾವುದೇ ಬ್ಯಾಕ್‌ಲ್ಯಾಗ್ ಇರಬಾರದು.
6. ಬಿ.ಬಿ.ಎಂ.ಪಿ, ಕಾರ್ಪೋರೇಷನ್, ಟೌನ್ ಮುನ್ಸಿಪಲ್ ಹಾಗೂ ಪಟ್ಟಣ ಪ್ರದೇಶದಲ್ಲಿ ನಿವಾಸಿಯಾದ ವಿದ್ಯಾರ್ಥಿಗಳು ಈ ಸೌಲಭ್ಯಕ್ಕೆ ಅರ್ಹರಾಗಿರುವುದಿಲ್ಲ.
7. ನಿಲಯಗಳು/ಪಿ.ಜಿ ಹೌಸಸ್ ಅಥವಾ ಬಾಡಿಗೆ ಮನೆಗಳಲ್ಲಿ ವಾಸವಿರುವ ವಿದ್ಯಾರ್ಥಿಗಳು ಈ ಸೌಲಭ್ಯಕ್ಕ ಅರ್ಹರಾಗಿರುತ್ತಾರೆ.
8. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಮಾಸಿಕ 1500 ಗಳಂತೆ 10 ತಿಂಗಳಿಗೆ ಗರಿಷ್ಠ 15,000 ರೂ ಗಳನ್ನು ಅವರ ವಿದ್ಯಾಭ್ಯಾಸದ ಅವಧಿಯಲ್ಲಿ ನೀಡಲಾಗುವುದು.
9. ವಿದ್ಯಾರ್ಥಿಯು ಕಡ್ಡಾಯವಾಗಿ ರಾಜ್ಯ ವಸತಿ ನಿಲಯ ತಂತ್ರಾಂಶ (State Hostel Portal) ದಲ್ಲಿ ಅರ್ಜಿ ಸಲ್ಲಿಸಿರಬೇಕು.

# ತರಬೇತಿ ಕಾರ್ಯಕ್ರಮಗಳು

## (7) ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಯೋಜನೆ:-

ಲೆಕ್ಕಶೀರ್ಷಿಕೆ 2225-04-277-0-06 (059) ರಾಜ್ಯವಲಯ ಯೋಜನೆ

(2024-25ನೇ ಸಾಲಿನ ಆಯವ್ಯಯ ರೂ.1715.00 ಲಕ್ಷಗಳು)

2024-25ನೇ ಸಾಲಿಗೆಬೆಂಗಳೂರು ನಗರದಲ್ಲಿ ನಿರ್ಮಿಸಿರುವ ಹಜ್ ಭವನದಲ್ಲಿ ಅಲ್ಪಸಂಖ್ಯಾತರ ಯುವ ಜನರಿಗೆ 10 ತಿಂಗಳ ವಸತಿ ಸಹಿತ ಐಎಎಸ್/ಕೆಎಎಸ್ ಪರೀಕ್ಷಾ ಪೂರ್ವ ತರಬೇತಿಯನ್ನು 300 ಅಭ್ಯರ್ಥಿಗಳಿಗೆ ನೀಡಲಾಗುತ್ತಿದೆ.

ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಗ್ರೂಪ್ ಸಿ/PSI ಹುದ್ದೆಗಳ ಪರೀಕ್ಷೆಗಳಿಗೆ ಪೂರ್ವಭಾವಿ ತರಬೇತಿಯನ್ನು ನೀಡಲಾಗುವುದು.

## 8) ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ:

ಲೆಕ್ಕಶೀರ್ಷಿಕೆ 2225-04-277-0-03 (051) ರಾಜ್ಯವಲಯ ಯೋಜನೆ

ಸದರಿ ಯೋಜನೆಯಡಿ 2024-25ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.

| ಕ್ರ.ಸಂ | ವಿದ್ಯಾರ್ಥಿವೇತನದ ಹೆಸರು | ಆದಾಯ ಮಿತಿ (ರೂ. ಲಕ್ಷಗಳಲ್ಲಿ) | ಪ್ರೋತ್ಸಾಹಧನ ಮೊತ್ತ (ರೂ. ಗಳಲ್ಲಿ) |
|---|---|---|---|
| 1 | ಐಐಟಿ, ಐಐಎಂ, ಐಐಎಸ್‌ಸಿ ಪ್ರೋತ್ಸಾಹಧನ | 8.00 | 2,00,000 |
| 2 | ಬಿ.ಎಡ್ ಪ್ರೋತ್ಸಾಹಧನ | 6.00 | 25,000 |
| 3 | ಪ್ರತಿಭಾ ಪುರಸ್ಕಾರ | ಇಲಾಖಾ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರು ಶಾಲಾ/ಕಾಲೇಜು ವಿದ್ಯಾರ್ಥಿಗಳಿಗೆ | SSLC – 1,000<br>PUC – 1,500 |
| 4 | "ಮೌಲನಾ ಅಬುಲ್ ಕಲಾಂ ಆಜಾದ್" ಪ್ರತಿಭಾ ಪುರಸ್ಕಾರ | ಎಸ್.ಎಸ್.ಎಲ್.ಸಿ, ದ್ವಿತೀಯ ಪಿಯುಸಿ, ಪರೀಕ್ಷೆಗಳಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕ ಗಳಿಸಿದ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ | SSLC – 8,000<br>PUC – 12,000 |

## 09) ವಸತಿ ಶಾಲೆಗಳು/ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ:

**(ರಾಜ್ಯವಲಯ ಯೋಜನೆ ಲೆಕ್ಕಶೀರ್ಷಿಕೆ 4225-04-190-0-03)**

**(2024-25ನೇ ಸಾಲಿನ ಆಯವ್ಯಯ ರೂ.60000.00 ಲಕ್ಷಗಳು)**

ವಸತಿ ಶಾಲೆಗಳು/ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ ರೂ.6000.00 ಲಕ್ಷಗಳ ಆಯವ್ಯಯವನ್ನುಕಲ್ಪಿಸಲಾಗಿದೆ. ಇದರಲ್ಲಿ ವಸತಿ ಶಾಲೆ/ವಿದ್ಯಾರ್ಥಿನಿಲಯಗಳ ಕಟ್ಟಡಗಳ ಮುಂದುವರೆದ ಕಾಮಗಾರಿಗಳಿಗೆ ಹಾಗೂ ಹೊಸ ಕಟ್ಟಡಗಳ ನಿರ್ಮಾಣ ಹೆಚ್ಚುವರಿ ಕೊಠಡಿಗಳ ನಿರ್ಮಾಣ, ದುರಸ್ತಿ ಮತ್ತು ನಿವೇಶನಗಳ ಖರೀದಿಗಾಗಿ ವಿನಿಯೋಗಿಸಲಾಗುವುದು. ಪ್ರಸ್ತುತ 161 ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ/ನವೋದಯ ಮಾದರಿ/ಮುಸ್ಲಿಂ ವಸತಿ ಶಾಲೆಗಳು, 13 ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಕಾಲೇಜುಗಳು, 250 ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆಗಳು, 414 ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ/ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳು, 10 ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳು ಇಲಾಖೆಯಡಿ ಕಾರ್ಯನಿರ್ವಹಿಸುತ್ತಿವೆ.

## 10) ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲಿ ಹೆಚ್ಚುವರಿ ಕಟ್ಟಡಗಳ ನಿರ್ಮಾಣ ಯೋಜನೆ:

**(ರಾಜ್ಯವಲಯ ಯೋಜನೆ ಲೆಕ್ಕಶೀರ್ಷಿಕೆ 4225-04-190-0-04)**

**(2024-25ನೇ ಸಾಲಿನ ಆಯವ್ಯಯ ರೂ.10000.00 ಲಕ್ಷಗಳು)**

ಅಲ್ಪ[ಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ 250 ಮೌಲಾನಾ ಅಜಾದ ಮಾದರಿ ಶಾಲೆಗಳಿಗೆ ತರಗತಿ ಕೊಠಡಿಗಳು/ಶೌಚಾಲಯಗಳು, ನಿವೇಶನಗಳ ಖರೀದಿಗಾಗಿ 2024-25ನೇ ಸಾಲಿನಲ್ಲಿ ರೂ.10000.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

## 11) ಪ್ರಧಾನ ಮಂತ್ರಿ ಜನ ವಿಕಾಸ ಕಾರ್ಯಕ್ರಮ:-

**ಲೆಕ್ಕಶೀರ್ಷಿಕೆ 2225-04-102-0-02 (059) ರಾಜ್ಯವಲಯ**

**2024-25ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯ ರೂ.28400.00 ಲಕ್ಷಗಳು**

ಕೇಂದ್ರ ಅಲ್ಪಸಂಖ್ಯಾತರ ಮಂತ್ರಾಲಯ ಪುರಸ್ಕೃತ ಪ್ರಧಾನ ಮಂತ್ರಿಜನ ವಿಕಾಸ ಕಾರ್ಯಕ್ರಮಯೋಜನೆಯನ್ನು ನಿರ್ದೇಶನಾಲಯದ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಯೋಜನೆಯ ಮಾರ್ಗಸೂಚಿಗಳನ್ವಯ ಪ್ರಸ್ತುತ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಶೇಕಡ 25ಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ಅಲ್ಪಸಂಖ್ಯಾತರ ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಸಮತೋಲನ ಅಭಿವೃದ್ಧಿಗಾಗಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜು, ನವೋದಯ ಮಾದರಿ ಶಾಲೆ, ಹೆಚ್ಚುವರಿ ಶಾಲಾ ಕೊಠಡಿ, ಮೌಲಾನಾ ಆಜಾದ್ ಮಾದರಿ ಶಾಲೆ ಹಾಗೂ ಸಾಮಾನ್ಯ ಸೇವಾ ಕೇಂದ್ರ ಕೌಶಲ್ಯ ತರಬೇತಿ ಕೇಂದ್ರ, ಶೌಚಾಲಯ ನಿರ್ಮಾಣ ವಸತಿ ನಿಲಯ ಕಾಮಗಾರಿಗಳನ್ನು ಈ ಯೋಜನೆಯಡಿ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಕಳೆದ 5 ವರ್ಷಗಳಲ್ಲಿ ಸುಮಾರು 198 ಕಾಮಗಾರಿಗಳು ಅನುಮೋದನೆಯಾಗಿ ಈ ಪೈಕಿ 139 ಕಾಮಗಾರಿಗಳು ಪೂರ್ಣಗೊಂಡು ಬಾಕಿ 59 ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ. 2024-25ನೇ ಸಾಲಿಗೆ ರೂ.165.00 ಕೋಟಿಗಳನ್ನು ಕೇಂದ್ರ ಪಾಲು ಹಾಗೂ ರೂ.133.00 ಕೋಟಿ ರಾಜ್ಯಪಾಲು ಒಟ್ಟಾರೆ ರೂ.298.00 ಕೋಟಿಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿರುತ್ತದೆ.

## 12) ಸರ್ ಸೈಯದ್ ಅಹ್ಮದ್ ಖಾನ್ ಅಧ್ಯಯನ ಹಾಗೂ ಸಂಶೋಧನ ಕೇಂದ್ರ:-

ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 207 ಎಂಡಿಎಸ್ 2014, ಬೆಂಗಳೂರು, ದಿನಾಂಕ: 26.08.2015ರಲ್ಲಿ 2015-16ನೇ ಸಾಲಿನಿಂದ ಜಾರಿಗೆ ಬರುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ "ಸರ್‌ಸೈಯದ್ ಅಹಮದ್‌ಖಾನ್ ಅಧ್ಯಯನ ಹಾಗೂ ಸಂಶೋಧನ ಕೇಂದ್ರ"ವನ್ನು ಸ್ಥಾಪಿಸಲು ಆದೇಶಿಸಿದೆ.

### (ಅ) ಮತೀಯ ಅಲ್ಪಸಂಖ್ಯಾತರ ಅಧ್ಯಯನ ಪೀಠ (Chair on Religious Minorities) ವನ್ನು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ಬೆಂಗಳೂರುಲ್ಲಿ ಸ್ಥಾಪನೆ:-

ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 340 ಎಂಡಿಎಸ್ 2015 ದಿನಾಂಕ:18.12.2015ರ ಆದೇಶದಲ್ಲಿ ಬೆಂಗಳೂರಿನ ನಾಗರಾಬಾವಿಯಲ್ಲಿರುವ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ Centre for study of Social Exclusive and Inclusive Policy ಅಡಿಯಲ್ಲಿ ಮತೀಯ ಅಲ್ಪಸಂಖ್ಯಾತ ಸಮುದಾಯಗಳಾದ ಮುಸ್ಲಿಂ, ಕ್ರೈಸ್ತ, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಸಮುದಾಯಗಳ ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಸಂಶೋಧನೆಯನ್ನು ನಡೆಸಲು "ಮತೀಯ ಅಲ್ಪಸಂಖ್ಯಾತರ ಅಧ್ಯಯನಪೀಠ"ವನ್ನು(Chair on Religious Minorities) ಸಂಪನ್ಮೂಲ ವ್ಯಕ್ತಿಗಳು ಮತ್ತು ಸಿಬ್ಬಂದಿ ಖರ್ಚುಗಳನ್ನು ಹಾಗೂ ಕಾರ್ಯಕ್ರಮ ವೆಚ್ಚವನ್ನು ಭರಿಸಿ ಪ್ರಾರಂಭಿಸಲು ಆದೇಶಿಸಲಾಗಿದೆ. ಅದರಂತೆ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯಲ್ಲಿ ಮತೀಯ ಅಲ್ಪಸಂಖ್ಯಾತರ ಅಧ್ಯಯನ ಪೀಠ ಸ್ಥಾಪಿಸಲಾಗಿದೆ.

## 13) ಕಾರ್ಪೋರೇಷನ್‌ಗಳಲ್ಲಿ ಅಲ್ಪಸಂಖ್ಯಾತರ ಸ್ಲಮ್/ಕಾಲೋನಿ ಅಭಿವೃದ್ಧಿ ಯೋಜನೆ:-

ಲೆಕ್ಕಶೀರ್ಷಿಕೆ 4225-04-102-0-01 (386) ರಾಜ್ಯಲಯ ಯೋಜನೆ
(2024-25ನೇ ಸಾಲಿನ ಆಯವ್ಯಯ ರೂ.40000.00 ಲಕ್ಷಗಳು)

ರಾಜ್ಯದ ಎಲ್ಲಾ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಬಿ.ಬಿ.ಎಂ.ಪಿ. ಒಳಗೊಂಡಂತೆ ಮಹಾನಗರ ಪಾಲಿಕೆ, ನಗರಸಭೆ ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ರೂ.40000.00 ಲಕ್ಷಗಳಲ್ಲಿ ಈ ಕೆಳಕಂಡಂತೆ ಕಾಲೋನಿಗಳ ಸಮಗ್ರ ಅಭಿವೃದ್ಧಿ ಹಾಗೂ ಮೂಲಸೌಕರ್ಯಗಳನ್ನು ಒದಗಿಸಲು ಮಾರ್ಗಸೂಚಿಗಳೊಂದಿಗೆ ಅನುಷ್ಟಾನಗೊಳಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

1. ರಸ್ತೆ ಮತ್ತು ಚರಂಡಿ/ ಒಳಚರಂಡಿ ನಿರ್ಮಾಣ.
2. ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು.
3. ಅಗತ್ಯವಿದ್ದಲ್ಲಿ ಕೊಳವೆ ಬಾವಿ ಕೊರೆಯುವುದು.
4. ಅಗತ್ಯವಿದ್ದಲ್ಲಿ ಸಾಮೂಹಿಕ ಶೌಚಾಲಯಗಳ ನಿರ್ಮಾಣ .

## 14) ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಅಭಿವೃದ್ಧಿ ಯೋಜನೆ:-

2024-25ನೇ ಸಾಲಿನ ಆಯವ್ಯಯ 10000.00 ಲಕ್ಷಗಳು ರನ್ವಯ ಎಲ್ಲಾ ಜಿಲ್ಲೆಯ 224 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳಿಂದ ವಂಚಿತರಾದ ಅಲ್ಪಸಂಖ್ಯಾತರ ಕಾಲೋನಿಗಳಲ್ಲಿ ಈ ಕೆಳಕಂಡ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

1. ರಸ್ತೆ ಮತ್ತು ಚರಂಡಿ/ ಒಳಚರಂಡಿ ನಿರ್ಮಾಣ.
2. ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು.
3. ಅಗತ್ಯವಿದ್ದಲ್ಲಿ ಕೊಳವೆ ಬಾವಿ ಕೊರೆಯುವುದು.
4. ಅಗತ್ಯವಿದ್ದಲ್ಲಿ ಸಾಮೂಹಿಕ ಶೌಚಾಲಯಗಳ ನಿರ್ಮಾಣ

## 15) ಮೌಲಾನಾ ಅಜಾದ್ ಅಲ್ಪಸಂಖ್ಯಾತರ ಭವನ್:-

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಅಲ್ಪಸಂಖ್ಯಾತರ ನಿರ್ದೇಶನಾಲಯ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಹಾಗೂ ಕರ್ನಾಟಕ ರಾಜ್ಯ ವಕ್ಫ್ ಸಮಿತಿಯ ಕಛೇರಿಗಳಿಗಾಗಿ ಅಲ್ಪಸಂಖ್ಯಾತರ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವ ಮಾಹಿತಿ ಕೇಂದ್ರ ಯೋಜನೆಯಡಿ ರಾಜ್ಯದ ಕೇಂದ್ರ ಕಛೇರಿ ಹಾಗೂ ಪ್ರತಿ ಜಿಲ್ಲೆಯಲ್ಲಿ ಒಂದು ಆಡಳಿತ ಸಂಕೀರ್ಣ ಭವನವನ್ನು ನಿರ್ಮಿಸಿ ಅದಕ್ಕೆ "ಮೌಲಾನಾ ಅಜಾದ್ ಅಲ್ಪಸಂಖ್ಯಾತರ ಭವನ್"ಎಂದು ಹೆಸರಿಡಲು ಸರ್ಕಾರವು ಆದೇಶಿಸಿದೆ.

## 16) ಕ್ರೈಸ್ತರ ಅಭಿವೃದ್ಧಿ ಯೋಜನೆ:-

ಲೆಕ್ಕಶೀರ್ಷಿಕೆ 2225-04-102-0-04 (059) ರಾಜ್ಯವಲಯ ಯೋಜನೆ
(2024-25 ನೇ ಸಾಲಿನ ಆಯವ್ಯಯ ರೂ. 8500.00 ಲಕ್ಷಗಳು)

ಕ್ರಿಶ್ಚಿಯನ್ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಇವುಗಳಲ್ಲಿ ಸಮುದಾಯಭವನ, ಚರ್ಚ್ ದುರಸ್ತಿ, ಸ್ಮಶಾನಗಳಿಗೆ ಆವರಣಗೋಡೆ, ಅನಾಥಾಶ್ರಮ/ವೃದ್ಧಾಶ್ರಮಗಳಿಗೆ ಸಹಾಯಧನ ನೀಡಲಾಗುತ್ತದೆ.

ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: MWD 192 MDS 2023 ದಿನಾಂಕ:28.06.2023ರ ಆದೇಶದಲ್ಲಿ 10 ವರ್ಷ ಮೇಲ್ಪಟ್ಟ ಚರ್ಚುಗಳ ದುರಸ್ಥಿ ಮತ್ತು ನವೀಕರಣಕ್ಕಾಗಿ ಅಂದಾಜು ವೆಚ್ಚ ಶೇ 50%ರಷ್ಟು ಗರಿಷ್ಟ ರೂ 50.00 ಲಕ್ಷಗಳು ಯಾವುದು ಕಡಿಮೆಯೋ ಅಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುವುದು.

## 1. ಕರ್ನಾಟಕದಲ್ಲಿ ಚರ್ಚ್‌ಗಳ ದುರಸ್ತಿ ಮತ್ತು ಜೀರ್ಣೋದ್ಧಾರಕ್ಕಾಗಿ ಸಹಾಯಾನುದಾನ:-

ಕರ್ನಾಟಕ ರಾಜ್ಯದಲ್ಲಿ ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿರುವ ಚರ್ಚ್‌ಗಳ ದುರಸ್ತಿ ಮತ್ತು ನವೀಕರಣ ಹಾಗೂ ಚರ್ಚ್ ಆವರಣ ಗೋಡೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅನುದಾನವನ್ನು ಬಿಡುಗಡೆ ಮಾಡಲು ಪ್ರತ್ಯೇಕವಾಗಿ ಸಹಾಯಾನುದಾನ ನೀಡಲಾಗುತ್ತಿದೆ.

**ಅನುದಾನದ ಸಾಮಾನ್ಯ ಷರತ್ತುಗಳು:-**

**1)** ಯಾವ ಸಂಸ್ಥೆಯ ಪರವಾಗಿ ಸಹಾಯಾನುದಾವನ್ನು ಕೋರಲಾಗಿದೆಯೋ ಅಂಥ ಪ್ರತಿಯೊಂದು ಸಂಸ್ಥೆಯು ವ್ಯವಸ್ಥಾಪಕ ಸಮಿತಿಯ ನಿಯಂತ್ರಣದಲ್ಲಿರತಕ್ಕದ್ದು ಮತ್ತು ವ್ಯವಸ್ಥಾಪಕ ಸಮಿತಿಯು ಸಂಸ್ಥೆಯ ನಿರ್ವಹಣೆಗೆ ಹಾಗೂ ಕಾಲಕಾಲಕ್ಕೆ ನಿಯಮಿಸಬಹುದಾದಂಥ ಸಹಾಯಾನುದಾನದ ಎಲ್ಲ ಷರತ್ತುಗಳನ್ನು ಯುಕ್ತವಾಗಿ ಪೂರೈಸುವ ಜವಾಬ್ದಾರಿ ಹೊಂದಿರತಕ್ಕದ್ದು.

## 2. ಕ್ರಿಶ್ಚಿಯನ್ ಸಮುದಾಯದ ಸ್ಮಶಾನಗಳಿಗೆ ಆವರಣಗೋಡೆ ನಿರ್ಮಾಣ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಹಾಯಾನುಧನ:-

ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 209 ಎಂಡಿಎಸ್ 2017 ದಿನಾಂಕ: 03.06.2017ರ ಮತ್ತು MWD-MDS/81/2025 ದಿನಾಂಕ:11.02.2025 ನಿರ್ಮಿಸಲು ಹಾಗೂ ಈ ಸ್ಮಶಾನಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ರೂ.30.00ಲಕ್ಷ ಸಹಾಯಾನುದಾನ ನೀಡಲು ಮಂಜೂರಾತಿ ನೀಡಿ ಆದೇಶಿಸಿದೆ.

**ಅರ್ಹತೆಗಳು:-**

1. ಸಂಬಂಧಪಟ್ಟ ಕ್ರಿಶ್ಚಿಯನ್ ಚರ್ಚಿನ ವತಿಯಿಂದ ಈ ಕಾಮಗಾರಿಗಳನ್ನು ಕೈಗೊಳ್ಳತಕ್ಕದ್ದು.
2. ನಿಗದಿತ ನಮೂನೆಯಲ್ಲಿ ಅರ್ಜಿ
3. ಸಂಸ್ಥೆಯ ನೋಂದಾಣಿ ಪ್ರಮಾಣ ಪತ್ರ (ಭಾರತೀಯ ನ್ಯಾಸ ಅಧಿನಿಯಮ ಅಥವಾ ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಅಧಿನಿಯಮದ ಮೇರೆಗೆ ನೊಂದಾವಣಿಯಾಗಿರಬೇಕು.
4. ಸಂಸ್ಥೆಯ ಮೂರು ವರ್ಷದ ವಾರ್ಷಿಕ ಲೆಕ್ಕ ಪತ್ರ (ಆಡಿಟ್ ರಿಪೋರ್ಟ್) (ಚಾರ್ಟೆಡ್ ಆಕೌಂಟೆಂಟ್ ರಿಂದ ತಯಾರಿಸಿರಬೇಕು.
5. ಕಾಮಗಾರಿಗಳ ಅಂದಾಜು ಪಟ್ಟಿಯನ್ನು ದೃಢೀಕೃತ ಅಭಿಯಂತರರು ಅಥವಾ Architect ರವರಿಂದ ಪಡೆದು ಸಲ್ಲಿಸುವುದು.
6. ಸ್ಮಶಾನ ಜಮೀನಿನ ದಾಖಲೆ ಪತ್ರ.

7. ಚರ್ಚ್ ಆಡಳಿತ ಮಂಡಳಿ ಪಟ್ಟಿ.
8. ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರ ಸ್ಥಳ ತನಿಖಾ ವರದಿ
9. ಸ್ಮಶಾನ ಸ್ಥಳವನ್ನು ತೋರಿಸುವ ಛಾಯಾಚಿತ್ರ, ಹಿಂಬದಿಯಲ್ಲಿ ಜಿಲ್ಲಾ ಅಧಿಕಾರಿಯು ದೃಢೀಕರಿಸತಕ್ಕದ್ದು.
10. ಮುಖ್ಯ ವ್ಯವಸ್ಥಾಪನ ಸಂಸ್ಥೆಯಿಂದ ಪಡೆದು ಮುಚ್ಚಳಿಕೆ ಪತ್ರ.

## ಸೇರ್ಪಡೆ ಆದೇಶ ಸಂಖ್ಯೆ:-

MWD-MDS/81/2025 ದಿನಾಂಕ:11.02.2025ರಂತೆ ಚರ್ಚ್‌ಗಳ ಅನಾವರಣ ಗೋಡೆ ನಿರ್ಮಾಣಕ್ಕೆ ರೂ.25.00 ಲಕ್ಷಗಳ ಅನುದಾನ ನೀಡಲು ಮಂಜೂರಾತಿ ನೀಡಿ ಆದೇಶಿಸಿದೆ.

## ಅನುದಾನದ ವಿವರ:-

ಕ್ರಿಶ್ಚಿಯನ್ ಸಮುದಾಯ ಸ್ಮಶಾನಗಳಿಗೆ ಆವರಣ ಗೋಡೆ ನಿರ್ಮಾಣ ಮತ್ತು ಈ ಸ್ಮಶಾನಗಳಿಗೆ ಮೂಲಭೂತ ಸೌಕರ್ಯಗಳಾದ ವಿದ್ಯುದೀಕರಣ, ಶುದ್ಧ ಕುಡಿಯುವ ನೀರಿನ ಹಾಗೂ ಕೊಳವೆ ಬಾವಿ ಸೌಕರ್ಯ, ಶವ ಇಡುವ ಕಟ್ಟಡ ರಸ್ತೆ, ಇತ್ಯಾದಿಗಳಿಗೆ ಅಂದಾಜು ವೆಚ್ಚದ ಶೇ 90% ರಷ್ಟು ಅಥವಾ ಗರಿಷ್ಠ ರೂ. 25.00 ಲಕ್ಷ ಯಾವುದು ಕಡಿಮೆಯೋ ಅದರಂತೆ ಕ್ರಿಶ್ಚಿಯನ್ ಸಂಸ್ಥೆಗಳಿಗೆ ಅನುದಾನ ಮಂಜೂರು ಮಾಡಲಾಗುವುದು.

## ಅರ್ಜಿ ಸಲ್ಲಿಸುವ ವಿಧಾನ:-

1. ಕ್ರಿಶ್ಚಿಯನ್ ಸಮುದಾಯದ ಸ್ಮಶಾನಗಳಿಗೆ ಆವರಣ ಗೋಡೆ ನಿರ್ಮಾಣ ಮತ್ತು ಈ ಸ್ಮಶಾನಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ ಸಂಬಂಧಪಟ್ಟ ಮುಖ್ಯಸ್ಥರು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರಿಗೆ ಮಾರ್ಗಸೂಚಿಗಳನ್ವಯ ನಿಗದಿತ ದಾಖಲಾತಿ ಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು.
2. ಜಿಲ್ಲಾ ಅಧಿಕಾರಿಗಳು, ಸದರಿ ಸ್ಮಶಾನದ ಸ್ಥಳ ತನಿಖೆ ನಡೆಸಿ ದಾಖಲಾತಿಗಳನ್ನು ಪರಿಶೀಲಿಸಿ, ಸ್ಪಷ್ಟ ಶಿಫಾರಸ್ಸಿನೊಂದಿಗೆ ನಿಯಮಾನುಸಾರ ಪ್ರಸ್ತಾವನೆಯನ್ನು ಸಂಸ್ಥೆಯಿಂದ ಅರ್ಜಿ ಸ್ವೀಕರಿಸಿದ 15 ದಿನಗಳ ಒಳಗಾಗಿ ನಿರ್ದೇಶನಾಲಯಕ್ಕೆ ಸಲ್ಲಿಸುವುದು.
3. ನಿರ್ದೇಶನಾಲಯವು ಸದರಿ ಯೋಜನೆಯಡಿ ಸ್ವೀಕೃತವಾದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸ್ಮಶಾನಗಳಿಗೆ ನಿಯಮಾನುಸಾರ ಸಹಾಯಾನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಸೂಕ್ತ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಅನುದಾನ ಬಿಡುಗಡೆಗಾಗಿ ಕಡತವನ್ನು ಸಲ್ಲಿಸುವುದು.

## ಇತರೆ ಷರತ್ತುಗಳು:-

1. ಕ್ರಿಶ್ಚಿಯನ್ ಸಮುದಾಯದ ಸಂಸ್ಥೆ ವ್ಯವಸ್ಥಾಪಕ ಸಮಿತಿ ಅಧ್ಯಕ್ಷ/ಕಾರ್ಯದರ್ಶಿ ಮಂಜೂರಾದ ಅನುದಾನ ಮೊತ್ತಕ್ಕೆ ಲೆಕ್ಕ ಪರಿಶೋಧನಾ ವಿವರಣೆಯೊಂದಿಗೆ ಅನುದಾನಗಳನ್ನು ಪಡೆದ ದಿನಾಂಕದಿಂದ ಹತ್ತು ತಿಂಗಳ ಒಳಗಾಗಿ ಬಳಕೆ ಪ್ರಮಾಣ ಪತ್ರವನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

2. ಸಾರ್ವಜನಿಕ ವಂತಿಕೆ ಹಾಗೂ ಸರ್ಕಾರದ ಅನುದಾನ ಉದ್ದೇಶಿತ ಕಾಮಗಾರಿಗಳಿಗೆ ಬಳಸಿರುವ ಬಗ್ಗೆ ಸರಿಯಾಗಿ ಲೆಕ್ಕ ಪತ್ರಗಳನ್ನು ನಿರ್ವಹಿಸತಕ್ಕದ್ದು. ಲೆಕ್ಕ ಪರಿಶೋಧನೆ ಮಾಡಿಸಿ ಸಾರ್ವಜನಿಕ ಹಣ ಅಪವ್ಯಯವಾಗದಂತೆ ಸಂಬಂಧಪಟ್ಟ ಸಂಸ್ಥೆಗಳು ನಿಗಾವಹಿಸುವುದು.

3. ಅನುದಾನವನ್ನು ಬಿಡುಗಡೆ ಮಾಡುವುದಕ್ಕೆ ಮುಂಚೆ, ಅನುದಾನ ಪಡೆದ ಸಂಸ್ಥೆ ಅನುದಾನದ ಷರತ್ತುಗಳನ್ನು ಪಾಲಿಸುವುದಾಗಿಯೂ ಅದಕ್ಕೆ ತಪ್ಪಿದ್ದಲ್ಲಿ ತಾನು ಅನುದಾನದ ಸಂಪೂರ್ಣ ಮೊತ್ತವನ್ನು ಸರ್ಕಾರಕ್ಕೆ ಮರುಪಾವತಿಸಲು ಬದ್ಧನಾಗಿರುವುದಾಗಿ ಸರ್ಕಾರಕ್ಕೆ ಒಂದು ನಷ್ಟ ಭರ್ತಿ ಪ್ರಮಾಣ ಪತ್ರವನ್ನು ರೂ. ೧೦೦/-ರ ಛಾಪಾ ಕಾಗದದಲ್ಲಿ ಬರೆದುಕೊಡತಕ್ಕದ್ದು.

4. ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಉಪಯೋಗಿಸಿದ ಬಗ್ಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಹಣ ಬಳಕೆ ಪ್ರಮಾಣ ಪತ್ರ (Utilisation Certificate) ಸಲ್ಲಿಸುವುದು.

5. ಯಾವ ಉದ್ದೇಶಕ್ಕಾಗಿ ಹಣ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಸಂಸ್ಥೆಯು ಬಳಸಿಕೊಂಡಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಯು ಖಚಿತಪಡಿಸಿಕೊಳ್ಳತಕ್ಕದ್ದು.

6. ಕಾಮಗಾರಿಯು ಪೂರ್ಣವಾಗಿರುವ ಬಗ್ಗೆ ವರದಿಯನ್ನು ಜಿಲ್ಲಾ ಅಧಿಕಾರಿಯು ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.

7. ಸರ್ಕಾರದ ಸಹಾಯಾನುದಾನ ದುರ್ಬಳಕ್ಕೆ ಮಾಡಿಕೊಳುವ ಸಂಸ್ಥೆಗಳ ಬಗ್ಗೆ ನಿರ್ದೇಶಕರಿಗೆ ಮಾಹಿತಿ ನೀಡಿ ಅಂತಹ ಸಂಸ್ಥೆಗಳಿಂದ ಸರ್ಕಾರದ ಅನುದಾನವನ್ನು ದಂಡ ಸಹಿತ ವಸೂಲಿ ಮಾಡಲು ಕ್ರಮವಹಿಸತಕ್ಕದ್ದು.

**೩. <u>ಕ್ರಿಶ್ಚಿಯನ್ ಸಮುದಾಯ ಭವನ ಕಟ್ಟಡ ನಿರ್ಮಾಣ:-</u>**

ಸಮುದಾಯ ಭವನ ಯೋಜನೆಯಡಿಯಲ್ಲಿ ರಾಜ್ಯದ ಮತೀಯ ಅಲ್ಪಸಂಖ್ಯಾತರಾದ, ಕ್ರಿಶ್ಚಿಯನ್ ಜನಾಂಗದವರು ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಉತ್ತೇಜನ ನೀಡಲು ಸದರಿ ಸಮುದಾಯಗಳಿಗೆ ಸೇರಿದ ನೊಂದಾಯಿತ ಸರ್ಕಾರಿ ಸ್ವಾಮ್ಯದ ಬೋರ್ಡು ಮತ್ತು ಕಾರ್ಪೋರೇಷನ್‌ಗಳು/ಖಾಸಗಿ ಸಂಘ ಸಂಸ್ಥೆಗಳು /ಟ್ರಸ್ಟ್‌ಗಳಿಗೆ ಸಮುದಾಯ ಭವನಗಳ ನಿರ್ಮಾಣಕ್ಕೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ರೂ.೫೦.೦೦ ಲಕ್ಷಗಳಿಗೆ ಮೀರದಂತೆ ಅನುದಾನ ಮಂಜೂರು ಮಾಡಲಾಗುವುದು.

**<u>ಷರತ್ತುಗಳು:-</u>**

೧) ಈ ಯೋಜನೆಯಡಿಯಲ್ಲಿ ಅನುದಾನ ಪಡೆಯಲು ನೋಂದಾಯಿತ ಮತೀಯ ಅಲ್ಪಸಂಖ್ಯಾತರ ಸರ್ಕಾರಿ ಸ್ವಾಮ್ಯದ ಬೋರ್ಡು ಮತ್ತು ಕಾರ್ಪೋರೇಷನ್‌ಗಳು/ಖಾಸಗಿ ಸಂಘ, ಸ್ವಯಂ ಸೇವಾ ಸಂಸ್ಥೆಗಳು/ಟ್ರಸ್ಟ್‌ಗಳು ಮಾತ್ರ ಅರ್ಹರಿರುತ್ತಾರೆ.

೨) ಅನುದಾನ ಪಡೆಯುವ ಸರ್ಕಾರಿ ಸ್ವಾಮ್ಯದ ಬೋರ್ಡ್ ಕಾರ್ಪೋರೇಷನ್ /ಖಾಸಗಿ ಸಂಘ, ಸ್ವಯಂಸೇವಾ ಸಂಸ್ಥೆಗಳು/ಟ್ರಸ್ಟ್‌ಗಳು ರಾಜ್ಯದಲ್ಲಿನ ಕರ್ನಾಟಕ ಸಂಘಗಳ ನೋಂದಾಣಿ ಕಾಯ್ದೆ ೧೯೬೦ ಅಥವಾ ಟ್ರಸ್ಟ್ ಕಾಯ್ದೆಯನ್ವಯ ಅಥವಾ ಇತರ ಸಂಬಂಧಪಟ್ಟ ಕಾಯ್ದೆಯಡಿಯಲ್ಲಿ ನೋಂದಣಿಯಾಗಿ ಕನಿಷ್ಠ ಮೂರು ವರ್ಷವಾಗಿರಬೇಕು.

೩) ಅನುದಾನ ಬಯಸುವ ಸ್ವಯಂಸೇವಾ ಸಂಸ್ಥೆಗಳು/ಟ್ರಸ್ಟ್‌ಗಳು ಸಂಘಗಳು ಕಳೆದ ವರ್ಷದ ಆಡಿಟ್ ವರದಿಗಳನ್ನು ಚಾರ್ಟೆಡ್ ಆಕೌಂಟೆಂಟ್‌ರವರಿಂದ ಆಡಿಟ್ ಮಾಡಿಸಿ ಸಲ್ಲಿಸಬೇಕು.

4) ಉದ್ದೇಶಿತ ಸಮುದಾಯ ಭವನ ಕಟ್ಟಡದ ನಿವೇಶನವು ಸಂಸ್ಥೆ, ಸಂಘ/ಟ್ರಸ್ಟ್‌ನ್ನು ಕಡ್ಡಾಯವಾಗಿ ಸಂಸ್ಥೆಯ ಹೆಸರಿನಲ್ಲಿರಬೇಕು. ಭೂ ಪರಿವರ್ತನೆಯಾಗಿದ್ದಲ್ಲಿ ನಿವೇಶನವು ವಾಣಿಜ್ಯ ಉದ್ದೇಶಕ್ಕೆ ಪರಿವರ್ತಿತ ವಾಗಿರಬೇಕು.

5) ಉದ್ದೇಶಿತ ಕಟ್ಟಡಕ್ಕೆ ಸ್ವಂತ ನಿವೇಶನ ಇರತಕ್ಕದ್ದು ಅಥವಾ 30 ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಗೆ ಗುತ್ತಿಗೆ ಅಥವಾ ಲೀಸ್ ಪಡೆದಿರುವ ನಿವೇಶನ ಇರತಕ್ಕದ್ದು.

6) ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ ಸಮುದಾಯಭವನಗಳ ನಿರ್ಮಾಣದ ಅಂದಾಜಿನ ಮೊತ್ತದ ಶೇ. 50% ರಷ್ಟು ಗರಿಷ್ಟ ರೂ. 1.00 ಕೋಟಿಗಳ ವರೆಗೆ ಅನುದಾನ ನೀಡಲಾಗುವುದು. ಯಾವುದೇ ಪ್ರಕರಣದಲ್ಲಿ ರೂ. 1.00 ಕೋಟಿಗಿಂತ ಹೆಚ್ಚಾಗಿ ಸರ್ಕಾರಿ ಅನುದಾನ ನೀಡಲಾಗುವುದಿಲ್ಲ.

7) ಜಿಲ್ಲಾ ಕೇಂದ್ರ ಸ್ಥಾನಗಳನ್ನು ಹೊರತುಪಡಿಸಿ ಇತರೆ ಸ್ಥಳಗಳಲ್ಲಿ ಸಮುದಾಯ ಭವನಗಳ ಅಂದಾಜಿನ ಮೊತ್ತವು ರೂ. 50.00 ಲಕ್ಷಗಳಿಗಿಂತ ಜಾಸ್ತಿ ಇದ್ದಲ್ಲಿ ಗರಿಷ್ಟ ರೂ. 50.00 ಲಕ್ಷಗಳನ್ನು ರೂ. 50.00 ಲಕ್ಷಗಳಿಗಿಂತ ಕಡಿಮೆ ಇದ್ದಲ್ಲಿ ಅಂದಾಜು ಮೊತ್ತದಷ್ಟು ಅನುದಾನವನ್ನು ಮಂಜೂರು ಮಾಡತಕ್ಕದ್ದು.

8) ಸಮುದಾಯಭವನವು ಅಗತ್ಯ ಮೂಲಭೂತ ಸೌಲಭ್ಯಗಳಾದ ನೀರು, ಶೌಚಾಲಯ, ವಿದ್ಯುತ್‌ಚ್ಛಕ್ತಿ, ಪಾರ್ಕಿಂಗ್ ಸೌಲಭ್ಯ ಅಗತ್ಯ ಕೊಠಡಿಗಳು, ಸ್ನಾನದ ಕೊಠಡಿಗಳು, ಲಾಕರ್‌ಗಳು ಸೌಲಭ್ಯ ಅಡುಗೆ ಸಾಮಗ್ರಿಗಳು ಹಾಗೂ ಉತ್ತಮ ಪರಿಸರವನ್ನು ಹೊಂದಿತಕ್ಕದ್ದು.

9) ಟ್ರಸ್ಟ್‌ನ ಸದಸ್ಯರು ಬೇರೆ ಬೇರೆ ಕುಟುಂಬಗಳಿಗೆ ಸೇರಿಸತಕ್ಕದ್ದು.

10) ಕಟ್ಟಡದ ನಕ್ಷೆಗೆ ಸ್ಥಳೀಯ, ನಗರಸಭೆ, ಪುರಸಭೆ, ಪಂಚಾಯ್ತಿಗಳಿಂದ ಅನುಮೋದನೆ ಹಾಗೂ ಪರವಾನೆ ಪಡೆದಿರಬೇಕು. ಕಟ್ಟಡದ ನಿರ್ಮಾಣ ಮೊತ್ತದ ಅಂದಾಜು ಪಟ್ಟಿಯನ್ನು ಸರ್ಕಾರಿ ಸಂಸ್ಥೆಗಳಲ್ಲಿನ /ಅನುಮೋದಿತ ಕಾರ್ಯಪಾಲಕ /ಸಹಾಯಕ ಕಾರ್ಯಪಾಲಕ ಅಭಿಯಂತರರಿಂದ ದೃಢೀಕರಣ ಮಾಡಿ ಸಲ್ಲಿಸತಕ್ಕದ್ದು.

11) ಜಿಲ್ಲಾ ಕೇಂದ್ರಗಳಲ್ಲಿ 500 ಜನರು ಒಟ್ಟಿಗೆ ಕೂರುವಂತಹ ಹಾಲ್‌ಗಳನ್ನು ಹಾಗೂ ಇತರೆ ಸ್ಥಳಗಳಲ್ಲಿ 200 ಜನರು ಒಟ್ಟಿಗೆ ಕೂರುವಂತಹ ಹಾಲ್‌ಗಳನ್ನು ಹೊಂದಿರತಕ್ಕದ್ದು.

12) ಸಮುದಾಯಭವನಗಳನ್ನು ವಾಣಿಜ್ಯ ಮತ್ತು ವಾಣಿಜ್ಯೇತರ ಉದ್ದೇಶಗಳಿಗೆ ಉಪಯೋಗಿಸಿಕೊಳ್ಳಬಹುದು.

13) ವಾಣಿಜ್ಯೇತರ ಉದ್ದೇಶಕ್ಕೆ ಹಾಗೂ ಇತರೆ ಸಾಮಾಜಿಕ ಸಮಾರಂಭಗಳಿಗೆ ಸಮಂಜಸವಾದ ಬಾಡಿಗೆಯನ್ನು ಸಂಬಂಧಪಟ್ಟ ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಅಧಿಕಾರಿಯವರೊಂದಿಗೆ ಸಮಾಲೋಚಿಸಿ ನಿಗದಿಪಡಿಸತಕ್ಕದ್ದು. ಇದನ್ನು ಆಯಾ ಜಿಲ್ಲಾಧಿಕಾರಿಯವರಿಂದ ಅನುಮೋದಿಸಿಕೊಳ್ಳತಕ್ಕದ್ದು.

14) ಮದುವೆ ಸಮಾರಂಭಗಳಿಗೆ ಹಾಗೂ ಇತರೆ ಸಮಾರಂಭಗಳಿಗೂ ಸಹ ಬಾಡಿಗೆ ದರಗಳನ್ನು ನಿಗದಿಪಡಿಸಲು ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದುಕೊಳ್ಳತಕ್ಕದ್ದು.

15) ಈ ದರಗಳನ್ನು ಪರಿಷ್ಕರಿಸಲು ಸಹ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದುಕೊಳ್ಳತಕ್ಕದ್ದು.

16) ಸಮುದಾಯಭವನಗಳ ನಿರ್ಮಾಣಕ್ಕೆ ಸರ್ಕಾರದ ಅನುದಾನ ಬಯಸುವ ಸಂಘ, ಸಂಸ್ಥೆ/ಟ್ರಸ್ಟ್‌ಗಳು ನಿಗದಿಪಡಿಸಿರುವ ನಮೂನೆಗಳಲ್ಲಿ ಮಾಹಿತಿಯನ್ನು ಕಡ್ಡಾಯವಾಗಿ ಕಳುಹಿಸತಕ್ಕದ್ದು.

17) ಸಂಘ ಸಂಸ್ಥೆ/ಟ್ರಸ್ಟ್‌ಗಳು ಸಲ್ಲಿಸುವ ಅರ್ಜಿ ಹಾಗೂ ದಾಖಲಾತಿಗಳನ್ನು ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪರಿಶೀಲಿಸಿ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಸೂಕ್ತ ಶಿಫಾರಸ್ಸಿನೊಂದಿಗೆ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರಿಗೆ ಕಳುಹಿಸತಕ್ಕದ್ದು.

18) ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರು ಪ್ರಸ್ತಾವನೆಯನ್ನು ಮೇಲ್ಕಂಡ ಮಾರ್ಗಸೂಚಿಗಳಂತೆ ಪರಿಶೀಲಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಕಳುಹಿಸತಕ್ಕದ್ದು.

19) ಸರ್ಕಾರದ ಹಂತದಲ್ಲಿ ಮಂಜೂರು ಮಾಡಿದ ಅನುದಾನವನ್ನು ಎರಡು ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು.

20) ಮೊದಲನೇ ಕಂತಿನಲ್ಲಿ ಬಿಡುಗಡೆಯಾದ ಸರ್ಕಾರದ ಅನುದಾನವನ್ನು ಆಯಾ ಸಂಘ ಸಂಸ್ಥೆ /ಟ್ರಸ್ಟ್ ಅನುದಾನವನ್ನು ಆಯಾ ಸಂಘ ಸಂಸ್ಥೆ/ಟ್ರಸ್ಟ್‌ಗಳಿಗೆ ಬಿಡುಗಡೆ ಮಾಡಿದ ನಂತರ ಕಡ್ಡಾಯವಾಗಿ ಪ್ರತಿ ತಿಂಗಳು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಕಾಮಗಾರಿಯ ಪ್ರಗತಿಯ ಬಗ್ಗೆ ಪರಿಶೀಲನೆ ಮಾಡಿ ನಿರ್ದೇಶಕರಿಗೆ ವರದಿ ಮಾಡತಕ್ಕದ್ದು.

೨೧) ಅನುದಾನದ ದುರುಪಯೋಗವಾಗಿದ್ದಲ್ಲಿ ಅಥವಾ ಕಾಮಗಾರಿಯು ಸ್ಥಗಿತವಾಗಿದ್ದಲ್ಲಿ ಆಯಾ ಸಂಘ ಸಂಸ್ಥೆ/ಟ್ರಸ್ಟ್‌ಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಿ ಸರ್ಕಾರದ ಅನುದಾನವನ್ನು ಶೇ. 10% ರಷ್ಟು ಬಡ್ಡಿಯೊಂದಿಗೆ ಮರುಪಾವತಿಸಲು ಕ್ರಮವಹಿಸತಕ್ಕದ್ದು.

೨೨) ಜಿಲ್ಲಾ ಕೇಂದ್ರಗಳಿಗೆ ಅನುದಾನವನ್ನು 4 ಸಮ ಕಂತುಗಳಲ್ಲಿ ತಾಲ್ಲೂಕು ಹಾಗೂ ಇತರೆ ಸ್ಥಳಗಳಿಗೆ ೨ ಸಮ ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು.

೨೩) ಮೊದಲ ಕಂತಿನಲ್ಲಿ ಮಂಜೂರಾಗಿರುವ ಅನುದಾನವನ್ನು ಪೂರ್ಣವಾಗಿ ಬಳಸಿಕೊಂಡು ಕಾಮಗಾರಿಯನ್ನು ಮುಂದುವರೆಸುತ್ತಿರುವ ಆಯಾ ಸಂಘ ಸಂಸ್ಥೆ/ಟ್ರಸ್ಟ್‌ಗಳು ಪ್ರಗತಿ ಪರಿಶೀಲನೆ ಮಾಡಿ ಎರಡನೇ ಹಾಗೂ ಉಳಿದ ಕಂತಿನ ಅನುದಾನ ಬಿಡುಗಡೆಗೆ ಹಣಬಳಕೆ ಪ್ರಮಾಣ ಪತ್ರದೊಂದಿಗೆ ಹಾಗೂ ಕಟ್ಟಡದ ಕಾಮಗಾರಿಯ ಛಾಯಾಚಿತ್ರಗಳೊಂದಿಗೆ ಪ್ರಸ್ತಾವನೆಯನ್ನು ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರಿಗೆ ಸೂಕ್ತ ಶಿಫಾರಸ್ಸಿನೊಂದಿಗೆ ಸಲ್ಲಿಸತಕ್ಕದ್ದು.

೨೪) ಎರಡನೇ ಹಾಗೂ ನಂತರದ ಕಂತಿನಲ್ಲಿ ಅನುದಾನವು ಸರ್ಕಾರದಿಂದ ಬಿಡುಗಡೆಯಾದ ನಂತರ ಸಂಬಂಧಪಟ್ಟ ಆಯಾ ಸಂಘ ಸಂಸ್ಥೆ/ಟ್ರಸ್ಟ್‌ಗಳಿಗೆ ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಅಧಿಕಾರಿಗಳು, ಜಿಲ್ಲೆಯ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಕಾಮಗಾರಿಯು ಪ್ರಗತಿಯಲ್ಲಿರುವ ಬಗ್ಗೆ ಪರಿಶೀಲಿಸಿ ಎರಡು ಕಂತುಗಳಲ್ಲಿ ಬಿಡುಗಡೆ ಮಾಡತಕ್ಕದ್ದು.

೨೫) ಕಟ್ಟಡದ ಪೂರ್ಣ ಕಾಮಗಾರಿಯು ಎರಡು ವರ್ಷಗಳೊಳಗಾಗಿ ಮುಗಿಯತಕ್ಕದ್ದು ಇದನ್ನು ಆಯಾ ಸಂಘ ಸಂಸ್ಥೆ/ಟ್ರಸ್ಟ್‌ಗಳಿಗೆ ತಿಳಿಸತಕ್ಕದ್ದು.

೨೬) ಕಾಮಗಾರಿ ಪೂರ್ಣವಾದ ನಂತರ ಕಟ್ಟಡವನ್ನು ಪರಿಶೀಲಿಸಿ ಸಂಪೂರ್ಣ ವರದಿಯನ್ನು ಜಿಲ್ಲಾಧಿಕಾರಿಗಳು ನಿರ್ದೇಶಕರಿಗೆ ಕಳುಹಿಸತಕ್ಕದ್ದು ಹಾಗೂ ಇದರ ಬಗ್ಗೆ ಅರ್ಧವಾರ್ಷಿಕ ವರದಿಯನ್ನು ಸರ್ಕಾರಕ್ಕೆ ನಿರ್ದೇಶಕರ ಮುಖಾಂತರ ಕಳುಹಿಸತಕ್ಕದ್ದು.

೨೭) ಪ್ರತಿ ವರ್ಷ ಆಯಾ ಜಿಲ್ಲಾಧಿಕಾರಿಗಳು ಆಯಾ ವರ್ಷದಲ್ಲಿ ಮಂಜೂರಾಗಿರುವ ಕಟ್ಟಡಗಳ ಅನುದಾನದ ವಿವರ, ಪೂರ್ಣಗೊಂಡಿರುವ ಕಟ್ಟಡಗಳ ವಿವರ ಪ್ರಗತಿಯಲ್ಲಿರುವ ಹಾಗೂ ಕಾಮಗಾರಿ ನಿಂತಿರುವ ಕಟ್ಟಡಗಳ ವಿವರಗಳ ವರದಿಯನ್ನು ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.

೨೮) ನಿರ್ದೇಶಕರು ಈ ವರದಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

೨೯) ಪೂರ್ಣಗೊಂಡಿರುವ ಕಟ್ಟಡಗಳಿಗೆ ಸಭೆ ಸಮಾರಂಭಗಳಿಗೆ ಸಂಬಂಧಿಸಿದಂತೆ ಬಾಡಿಗೆ ದರಗಳನ್ನು ನಿಗದಿಪಡಿಸಲು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಆಯಾ ಜಿಲ್ಲಾ ಅಧಿಕಾರಿಗಳ ಅನುಮತಿ ಹಾಗೂ ಅನುಮೋದನೆಯೊಂದಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಬಾಡಿಗೆ ದರಗಳನ್ನು ನಿಗದಿಪಡಿಸತಕ್ಕದ್ದು.

೩೦) ಸಮುದಾಯಭವನಗಳನ್ನು ಯಾವುದೇ ರಾಜಕೀಯ ಚಟುವಟಿಕೆಗಳಿಗೆ ಉಪಯೋಗಿಸಬಾರದು.

೩೧) ಸಮುದಾಯಭವನಗಳನ್ನು ಇತರೆ ಅಲ್ಪಸಂಖ್ಯಾತರ ಸಮುದಾಯಗಳ ಸಮಾರಂಭಗಳಿಗೂ ನೀಡತಕ್ಕದ್ದು.

೩೨) ಯಾವುದೇ ಸಮಾಜಘಾತುಕ ಚಟುವಟಿಕೆಗಳಿಗೆ ಇದನ್ನು ಬಳಸಿಕೊಂಡಿದ್ದಲ್ಲಿ ಆಯಾ ಸಂಘ ಸಂಸ್ಥೆ/ಟ್ರಸ್ಟ್‌ಗಳ ಮೇಲೆ ನಿಯಮಾನುಸಾರ ಕ್ರಮ ಜರುಗಿಸತಕ್ಕದ್ದು ಹಾಗೂ ಇಂತಹ ಸಂಧರ್ಭಗಳಲ್ಲಿ ಸಮುದಾಯಭವನ ಕಟ್ಟಡಗಳನ್ನು ಯಾವುದೇ ಷರತ್ತಿಲ್ಲದೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ತನ್ನ ವಶಕ್ಕೆ ತೆಗೆದುಕೊಳ್ಳತಕ್ಕದ್ದು. ಈ ಬಗ್ಗೆ ಸಂಘ ಸಂಸ್ಥೆಗಳಿಂದ ಪ್ರಮಾಣ ಪತ್ರ ಪಡೆಯತಕ್ಕದ್ದು.

೩೩) ಸರ್ಕಾರದ ಸಭೆ ಸಮಾರಂಭಗಳು ತರಬೇತಿಗಳಿಗೆ ಉಚಿತವಾಗಿ ನೀಡತಕ್ಕದ್ದು ಇದಕ್ಕೆ ಜಿಲ್ಲಾಧಿಕಾರಿಗಳ ಅನುಮತಿ ಪಡೆಯತಕ್ಕದ್ದು.

೩೪) ಸಭೆ/ಸಮಾರಂಭ/ಮದುವೆ ಈ ಕಾರ್ಯಗಳಿಗೆ ಸಮುದಾಯಭವನ ನೀಡುವಾಗ ಪ್ರತ್ಯೇಕ ರಿಜಿಸ್ಟರ್‌ನಲ್ಲಿ ಹೆಸರು, ಬಾಡಿಗೆ ದಿನಾಂಕ ನಮೂದಿಸತಕ್ಕದ್ದು. ಇದನ್ನು ಇಲಾಖಾಧಿಕಾರಿಗಳ ಪರಿಶೀಲನೆಗೆ ಬಂದಾಗ ತೋರಿಸತಕ್ಕದ್ದು.

೩೫) ಸಂಘ ಸಂಸ್ಥೆಗಳ ನಿಯತಕಾಲಿಕವಾಗಿ ಅಧೀನ ಮಾಡಿಕೊಳ್ಳತಕ್ಕದ್ದು.

**<u>ಒದಗಿಸಬೇಕಾದ ದಾಖಲಾತಿಗಳು:</u>**

